# ಅಪೊಸ್ತಲನಾದ ಪೌಲನು ತಿಮೊಥೆಯನಿಗೆ ಬರೆದ ಎರಡನೇ ಪತ್ರಿಕೆ

**ಗ್ರಂಥಕರ್ತ:**

ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು.

**ದಿನಾಂಕ:**

ಕ್ರಿಶ 67 ರಲ್ಲಿ.

**ಧ್ಯೇಯ:**

ಸುವಾರ್ತೆ ಸಾರಿದ್ದರ ನಿಮಿತ್ತ, ಪೌಲನು ಹಿಂಸೆಗೊಳಗಾಗಿ ಸೆರೆಮನೆಯಲ್ಲಿದ್ದಾನೆ. ಅವನ ಸ್ನೇಹಿತರು ಮತ್ತು ಸಹಾಯಕರು ಅವನನ್ನು ತೊರೆದಿದ್ದಾರೆ (1:15; 4:16). ಅವನಿಗೆ ತನ್ನ ಮರಣದ ಸಮಯ ಹತ್ತಿರವಾಗಿದೆ ಎಂದು ಗೊತ್ತಿತ್ತು (4:6). ಆದರೆ ವೇದನೆಯ ಪರಿಸ್ಥಿತಿಯ ನಡುವೆಯೂ ಪೌಲನು ನಿರಾಸೆಗೊಂಡಿರಲಿಲ್ಲ ಅಥವಾ ದುಃಖಪಡಲಿಲ್ಲ ಅಥವಾ ಹೆದರಿಕೊಳ್ಳಲಿಲ್ಲ ಅಥವಾ ಸೋತುಹೋಗಲಿಲ್ಲ – ಬದಲಾಗಿ ಇವುಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾ ಇದ್ದನು. ಅವನು ತನ್ನ ನಿರೀಕ್ಷೆ ಮತ್ತು ಭರವಸೆಯನ್ನು ತಿಮೋಥೆಯನಿಗೆ ಪ್ರಕಟಿಸಿದನು ಮತ್ತು ಕರ್ತನ ಸೇವೆಯಲ್ಲಿ ಅವನಿಗೆ ಪ್ರೋತ್ಸಾಹ ನೀಡಲು ಪತ್ರಿಕೆಯನ್ನು ಬರೆದನು. ದೇವರಾತ್ಮನ ಪ್ರೇರಣೆಯಿಂದ ಭವಿಷ್ಯದಲ್ಲಿ ಜನರು ಹೇಗಿರುವರು ಎಂಬದನ್ನು ಸೂಚಿಸಿದನು ಮತ್ತು ಸ್ವಸ್ಥ ಬೋಧನೆ, ಸರಿಯಾದ ಉಪದೇಶ, ಪರಿಶುದ್ಧ ಜೀವನ, ನಂಬಿಗಸ್ತ ಸೇವೆ ಮತ್ತು ಧೈರ್ಯದಿಂದ ಬೋಧನೆ ಇವುಗಳ ಪ್ರಾಮುಖ್ಯತೆಯನ್ನು ತಿಳಿಸಿದನು.

# 1 1

- **1:1** ರೋಮಾ 1:1; ಗಲಾ 1:1.

“*ಚಿತ್ತಾನುಸಾರ*”– ಪೌಲನ ಅಪೊಸ್ತಲನವು ಎಲ್ಲದಕ್ಕಿಂತ ಹೆಚ್ಚಾಗಿ ಒಂದು ದೊಡ್ಡ ವಿಷಯದನುಸಾರವಾಗಿತ್ತು: ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವವರಿಗೆ ದೇವರು ನಿತ್ಯಜೀವದ ವಾಗ್ದಾನವನ್ನು ಮಾಡಿದ್ದಾನೆ (ರೋಮಾ 1:2; ತೀತ 1:2; 1 ಯೋಹಾನ 5:9-12 ರೊಂದಿಗೆ ಹೋಲಿಸಿ ನೋಡಿರಿ). **2**

- **1:2** 1 ತಿಮೊ 1:2. **3**

**1:3** ದೇವರಿಗೆ ಸ್ತೋತ್ರ ಸಲ್ಲಿಸುತ್ತೇನೆ – ರೋಮಾ 1:8; 1 ಕೊರಿಂಥ 1:4; ಫಿಲಿಪ್ಪಿ 1:3; ಕೊಲೊ 1:3; 1 ಥೆಸ 1:2.

*"ಪೂರ್ವಿಕರು"*– ಹಳೆಯ ಒಡಂಬಡಿಕೆಯಲ್ಲಿರುವ ದೇವರ ಸೇವಕರು. ನಿಜವಾದ ಧರ್ಮ ಮತ್ತು ದೇವರಿಗಾಗಿ ಮಾಡುವ ಸೇವೆಯ ಬೇರುಗಳು ಅವರದ್ದಾಗಿವೆ, ತನ್ನ ನಂಬಿಕೆ ಮತ್ತು ಸೇವೆ ಅವರ ನಂಬಿಕೆ ಹಾಗೂ ಸೇವೆಯ ಮುಂದುವರೆಯುವಿಕೆಯಾಗಿವೆ ಎಂಬ ತನ್ನ ಧೃಢತೆಯನ್ನು ಪೌಲನು ಸೂಚಿಸುತ್ತಾ ಇದ್ದಾನೆ.

*"ಒಳ್ಳೇ ಮನಸ್ಸಾಕ್ಷಿ"*– ಅಪೊ 23:1; 24:16; 1 ಕೊರಿಂಥ 4:4; 2 ಕೊರಿಂಥ 1:12.

*"ಹಗಲಿರುಳು"*– ಪೌಲನು ಸೆರೆಮನೆಯಲ್ಲಿದ್ದನು (ವ 8) ಆದರೆ ಅವನ ಸೇವೆಗೆ ಯಾವುದೇ ಅಡ್ಡಿಯಿರಲಿಲ್ಲ. ಪ್ರಾರ್ಥನೆ ಮಾಡಲು ಅವನಿಗೆ ಬಹಳಷ್ಟು ಸಮಯ ಸಿಗುತ್ತಾ ಇತ್ತು ಮತ್ತು ಅವನು ತನಗೆ ದೊರೆತ ಅವಕಾಶವನ್ನು ಸತತವಾಗಿ ಸದುಪಯೋಗಪಡಿಸಿಕೊಳ್ಳುತ್ತಾ ಇದ್ದನು. **4**

**1:4** *"ಕಣ್ಣೀರು"*– ಪೌಲನು ಬಹುಶಃ ಅವರನ್ನು ಬಿಟ್ಟು ಕಡೇ ಸಲ ಅಗಲಿದ್ದನ್ನು ಸೂಚಿಸುತ್ತಾ ಇದ್ದಾನೆ. ತಿಮೊಥೆಯ ಕಣ್ಣೀರು ಪೌಲನ ಮೇಲೆ ಅವನಿಗಿದ್ದ ಪ್ರೀತಿ ಮತ್ತು ಪೌಲನ ಜೀವಿತವು ಏನನ್ನು ಪ್ರತಿನಿಧಿಸುತ್ತದೆ ಎಂಬದನ್ನು ಪ್ರಕಟಿಸುತ್ತದೆ. ಅಪೊ 20:37-38 ರೊಂದಿಗೆ ಹೋಲಿಸಿ ನೋಡಿರಿ.

*"ನಿನ್ನನ್ನು ನೋಡಬೇಕೆಂಬ ಅಪೇಕ್ಷೆ"*– ರೋಮಾ 1:11; 1 ಥೆಸ 3:6; ಫಿಲಿಪ್ಪಿ 1:8. **5**

**1:5** ತಿಮೊಥೆಯನ ತಂದೆ ಮತ್ತು ತಾತ ಗ್ರೀಕರಾಗಿದ್ದರು ಹಾಗೂ ವಿಶ್ವಾಸಿಗಳಾಗಿರಲಿಲ್ಲವೆಂದು ಅನ್ನಿಸುತ್ತದೆ ಆದರೆ ಅವನ ತಾಯಿ ಮತ್ತು ಅಜ್ಜಿ ಯೆಹೂದ್ಯರಾಗಿದ್ದರು. ಅವನ ತಾಯಿ ಮತ್ತು ಅಜ್ಜಿ ಇಬ್ಬರೂ ಯೇಸು ಕ್ರಿಸ್ತನ ಸುವಾರ್ತೆಯನ್ನು ನಂಬಿದ್ದರು (ಅಪೊ 16:1-3).

*"ನಿಷ್ಕಪಟವಾದ ನಂಬಿಕೆ"*– 1 ತಿಮೊ 1:5. **6**

**1:6** *"ವರ"*–ಎಂದರೆ ಅವರ ಮಾತಿನ ಅರ್ಥ ಸ್ವಾಭಾವಿಕವಾದ ಸಾಮರ್ಥ್ಯವಲ್ಲ ಬದಲಾಗಿ ದೇವರು ತಿಮೊಥೆಯನಿಗೆ ನಿರ್ದಿಷ್ಟವಾದ ಸಮಯದಲ್ಲಿ ನೀಡಿದ ಆತ್ಮೀಕ ಸಾಮರ್ಥ್ಯವಾಗಿದೆ. ದೇವರ ಸೇವಕರು ಅಂಥ ಸಾಮರ್ಥ್ಯವನ್ನು ನಿರ್ಲಕ್ಷಿಸಬಹುದು ಅಥವಾ ಅದರ ಪ್ರಜ್ವಲಿಸುವ ಬೆಳಕು ಸಾಯಲು ಬಿಡಬಹುದು. ಆದ್ದರಿಂದ ಪೌಲನು ಈ ಪ್ರಬೋಧನೆಯನ್ನು ಕೊಟ್ಟಿದ್ದಾನೆ. ಸಭೆಯ ಹಿರಿಯರು ತಿಮೊಥೆಯನ ಮೇಲೆ ಹಸ್ತಗಳನ್ನಿಟ್ಟಾಗ ಅವನು ಈ ಕೃಪಾವರವನ್ನು ಹೊಂದಿಕೊಂಡಿದ್ದನು (1 ತಿಮೊ 4:14). ಪೌಲನು ಇಲ್ಲಿ ಆ ಸಂದರ್ಭವನ್ನು ಸೂಚಿಸುತ್ತಾ ಇದ್ದಾನೋ ಇಲ್ಲವೋ ನಮಗೆ ಗೊತ್ತಿಲ್ಲ. ವಿವಿಧ ಉದ್ದೇಶಗಳಿಗಾಗಿ ಎರಡು ಸಲ ಬೇರೆಬೇರೆಯಾಗಿ ಹಸ್ತಗಳನ್ನಿಡುವದು ಗೊತ್ತಿರದ ವಿಷಯವೇನೂ ಅಲ್ಲ. ಅಪೊ 9:17; 13:3 ನೋಡಿರಿ. **7**

**1:7** *"ಹೇಡಿತನದ ಆತ್ಮ"*– ತಿಮೊಥೆಯನು ತನಗೆ ದೊರೆತ ಕೃಪಾವರವನ್ನು ಉಪಯೋಗಿಸಲು ಬೇಕಾದ ಧೈರ್ಯ ಇಲ್ಲದವನಾದ್ದರಿಂದ ಅದು ಪ್ರಜ್ವಲಿಸದಂತೆ ಸಾಯಲು

ಬಿಡೂವ ಶೋಧನೆಗೆ ಒಳಗಾಗುವ ಹಾಗಿದ್ದನು ಎಂಬದು ಇದರಿಂದ ಗೊತ್ತಾಗುತ್ತದೆ. ದೇವರು ಕೊಡುವ ವರಗಳನ್ನು ಉಪಯೋಗಿಸಲು ಧೈರ್ಯ ಬೇಕು (ಅಪೊ 4:29; ಎಫೆ 6:19). ಯೇಸು ಕ್ರಿಸ್ತನ ಸೇವೆಯಲ್ಲಿ ಅವಶ್ಯವಾಗಿರುವ ಇನ್ನೂ ಮೂರು ವಿಷಯಗಳ ಬಗ್ಗ ಪೌಲನು ತಿಳಿಸಿದ್ದಾನೆ. ದೇವರಾತ್ಮನು ಅವುಗಳನ್ನು ನಮಗೆ ಕೊಡುತ್ತಾನೆ. ದೇವರು ನಮ್ಮನ್ನು ತನ್ನ ಸೇವೆಗಾಗಿ ಕರೆಯುವಾಗ ಆತನ ಸೇವೆ ಮಾಡಲು ನಮ್ಮನ್ನು ಸಮರ್ಥರನ್ನಾಗಿ ಮಾಡುತ್ತಾನೆ (2 ಕೊರಿಂಥ 3:5-6).

*"ಬಲ"*– ಅಪೊ 1:8; 1 ಕೊರಿಂಥ 2:4; 4:20; 2 ಕೊರಿಂಥ 4:7; 12:9; ಎಫೆ 1:19; 3:16; ಕೊಲೊ 1:11.

*"ಪ್ರೀತಿ"*– ಬಲವಿಲ್ಲದ ಪ್ರೀತಿ ನಿರಾಶಾದಾಯಕವಾಗಿರುತ್ತದೆ. ಬಲವಿಲ್ಲದ ಪ್ರೀತಿ ಅಪಾಯಕಾರಿಯಾಗಿರುತ್ತದೆಯೇ ಹೊರತು ಸಹಕಾರಿಯಾಗಿರುವದಿಲ್ಲ. ಎಲ್ಲದಕ್ಕಿಂತ ಹೆಚ್ಚಾಗಿ, ಯೇಸು ಕ್ರಿಸ್ತನ ಸೇವಕರಿಗೆ ಪ್ರೀತಿ ಅವಶ್ಯಕವಾಗಿದೆ – 1 ಕೊರಿಂಥ 13:1-3.

*"ಶಿಕ್ಷಣ"*– ಅಥವಾ ಬಹುತೇಕ, "ಶಮೆದಮೆ". ಇದು ಆರೋಗ್ಯಕರವಾದ ರೀತಿಯಲ್ಲಿ ಯೋಚಿಸುವ, ಒಬ್ಬನು ತನ್ನ ಆಲೋಚನೆಗಳನ್ನು ಮತ್ತು ಸ್ವಭಾವಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಸಾಮರ್ಥ್ಯವಾಗಿದೆ. 1 ತಿಮೊ 3:2 ನೋಡಿರಿ. **8**

**1:8** *"ನಾಚಿಕೆಪಡುವ"*– ಮಾರ್ಕ 8:38; ರೋಮಾ 1:16. ಅನೇಕ ಜನರು ಯೇಸು ಕ್ರಿಸ್ತನ ಸುವಾರ್ತೆಯನ್ನು ಹುಚ್ಚುತನ (1 ಕೊರಿಂಥ 1:18,23) ಮತ್ತು ಯೇಸು ಕ್ರಿಸನ ಶಿಲುಬೆಯ ಮರಣದ ಪ್ರಚುರಪಡಿಸುವಿಕೆ ಅಪರಾಧ (ಗಲಾ 5:11) ಎಂದು ಹೇಳುತ್ತಾರೆ. ಸ್ವಾಭಾವಿಕವಾಗಿ ಹೇಡಿಯಾಗಿರುವ ಕ್ರೈಸ್ತನು, ನಮ್ಮ ಅವಿಧೇಯತೆಯ ಸ್ವಭಾವದಿಂದ ಎದುರಾಗುವ ಗರ್ವಕ್ಕೆ ಒಳಗಾದರೆ, ಇತರರಿಗೆ ಯೇಸು ಕ್ರಿಸ್ತನ ಬಗ್ಗ ಹೇಳುವದನ್ನು ನಾಚಿಕೆ ಎಂಬದಾಗಿ ಎಣಿಸುತ್ತಾನೆ. ಈ ಶೋಧನೆಯನ್ನು ನಾವೆಲ್ಲರೂ ದೇವರಾತ್ಮನ ಬಲದ ಮೂಲಕ ಜಯಿಸಬೇಕು.

*"ಆತನ ಸೆರೆಯವನು"*– 2:9; ಎಫೆ 3:1.

*"ಸುವಾರ್ತೆಗೋಸ್ಕರ ಶ್ರಮೆಯನ್ನನುಭವಿಸುವದು"*– ಸುವಾರ್ತೆ ಸಾರುವವರು ಅಥವಾ ಸುವಾರ್ತೆಯನ್ನು ನಂಬುವವರಿಗೆ ಶ್ರಮೆಗಳು ಎದುರಾಗುತ್ತವೆ – 2:3; 4:5; ರೋಮಾ 5:3; 8:17; 2 ಕೊರಿಂಥ 4:17; 1 ಪೇತ್ರ 4:12-16. **9**

**1:9** *"ಪರಿಶುದ್ಧರಾಗುವದಕ್ಕೆ ಕರೆದನು"*– ರೋಮಾ 1:6; 8:30; 1 ಕೊರಿಂಥ 1:2; ಎಫೆ 1:4.

*"ಸಂಕಲ್ಪ"*– ಎಫೆ 1:5,9,12. "ಕೃಪೆ" – ರೋಮಾ 3:24; ಎಫೆ 2:8-9; ತೀತ 3:5-7.

*"ಕ್ರಿಸ್ತನಲ್ಲಿ"*– ಯೋಹಾನ 15:4; ರೋಮಾ 6:5; 8:1; ಎಫೆ 1:1,4.

*"ಅನಾದಿಕಾಲದಲ್ಲಿ"*– ಎಫೆ 1:4; ತೀತ 1:2. **10**

**1:10** *"ಪ್ರಕಾಶಪಡಿಸಿದ್ದಾನೆ"*– ಯೋಹಾನ 1:17.

“*ಮರಣವನ್ನು ನಿವೃತ್ತಿ ಮಾಡಿದ್ದಾನೆ*”– ಮತ್ತಾಯ 28:6; ಇಬ್ರಿ 2:14; ಯೋಹಾನ 5:24; 11:25-26. ಮರಣವು ಅಂತಿಮವಾಗಿ ನಿರ್ಲಯವಾಗಲು ಯೇಸು ಕ್ರಿಸ್ತನು ಅಡಿಪಾಯವನ್ನು ಹಾಕಿದ್ದಾನೆ – 1 ಕೊರಿಂಥ 15:26 ಮತ್ತು ವಿಶ್ವಾಸಿಗಳ ನಿತ್ಯಜೀವಕ್ಕೆ ಮಾರ್ಗವನ್ನು ತೆರೆದಿದ್ದಾನೆ – ಯೋಹಾನ 3:16; 5:24; 6:47. ಮತ್ತು ಆತನು ಜೀವ ಮತ್ತು ನಿರ್ಲಯತ್ವದ ಸತ್ಯವನ್ನು ಪ್ರಕಟಿಸಿದ್ದಾನೆ – ಅಂದರೆ ಆತನು ಬರುವದಕ್ಕಿಂತ ಮುಂಚೆ ಅಡಕವಾಗಿದ್ದ ಹಾಗೂ ಗುಪ್ತವಾಗಿದ್ದ ಸತ್ಯವನ್ನು ಪ್ರಕಟಿಸಿದ್ದಾನೆ. ನಿರ್ಲಯತ್ವದ ಬಗ್ಗೆ 1 ಕೊರಿಂಥ 15 ನೇ ಅಧ್ಯಾಯವನ್ನು ನೋಡಿರಿ. **11**

**- 1:11** 1 ತಿಮೊ 2:7. **12**

**1:12** ಪೌಲನ ಶ್ರಮೆಗಳು (2:9; 2 ಕೊರಿಂಥ 1:8; 4:8-12; 6:4-10; 11:23-27) ಯೇಸು ಕ್ರಿಸ್ತನ ಸೇವಕನಾಗಿದ್ದರಿಂದ ಅವನಿಗೆ ಎದುರಾದವು (ಯೋಹಾನ 15:18-21; 16:1-4). ಸೇವೆಯನ್ನು ಬಿಟ್ಟುಬಿಡುವ ಮೂಲಕ ಅವನು ಅವೆಲ್ಲವುಗಳಿಗೆ ತಪ್ಪಿಸಿಕೊಳ್ಳಬಹುದಾಗಿತ್ತು. ಆದರೆ ಅವನು ಹಾಗೆ ಮಾಡಲಿಲ್ಲ ಯಾಕಂದರೆ ಅವನು ಯೇಸು ಕ್ರಿಸ್ತನಿಗಾಗಿ ಶ್ರಮೆಗಳನ್ನನುಭವಿಸಲು ನಾಚಿಕೆಪಡುವವನಾಗಿರಲಿಲ್ಲ – ಅವನು ವ್ಯತ್ಯಾಸವುಳ್ಳವನಾಗಿದ್ದನು (ರೋಮಾ 5:3; 2 ಕೊರಿಂಥ 4:17-18; 12:10; ಕೊಲೊ 1:24).

“*ನಾನು ನಂಬಿರುವಾತನನ್ನು*”– ತಾನು ಏನು ನಂಬಿದ್ದೇನೆ ಎಂಬದೂ ಅವನಿಗೆ ಗೊತ್ತಿತ್ತು ಆದರೆ ಅವನು ಇಲ್ಲಿ ಯೇಸು ಕ್ರಿಸ್ತನ ಕುರಿತು ತನಗಿರುವ ವ್ಯಯಕ್ತಿಕ ಅನುಭವದ ಬಗ್ಗೆ ಮಾತನಾಡುತ್ತಾ ಇದ್ದಾನೆ. ಇದು ನಿತ್ಯಜೀವವಾಗಿದೆ (ಯೋಹಾನ 17:3) ಮತ್ತು ದೇವರ ಮಕ್ಕಳೆಲ್ಲರೂ ಈ ತಿಳುವಳಿಕೆಯನ್ನು ಹೊಂದಿದ್ದಾರೆ (ಇಬ್ರಿ 8:11).

“*ನನ್ನ ವಶದಲ್ಲಿಟ್ಟಿರುವದು*”– ಅವನು ಬಹುಶಃ ತನ್ನನ್ನು ಮತ್ತು ತನಗೆ ಸಂಭವಿಸಿದ ಎಲ್ಲವನ್ನೂ ಸೂಚಿಸುತ್ತಾ ಇದ್ದಾನೆ. ಇದಕ್ಕೂ ಮೊದಲು ಅವನು ತನ್ನನ್ನು ಸಂಪೂರ್ಣವಾಗಿ ಯೇಸು ಕ್ರಿಸ್ತನ ಬಲವುಳ್ಳ ಹಸ್ತಗಳಿಗೆ ಒಪ್ಪಿಸಿದ್ದನು ಮತ್ತು ತನ್ನ ಪರಿಪಾಲನೆಯಿಂದ ಅವನು ತಪ್ಪಿಸಿಕೊಳ್ಳುವಂತೆ ಯಾವುದೂ ಅಥವಾ ಯಾರೂ ಪ್ರಯತ್ನಿಸಲು ಯೇಸು ಕ್ರಿಸ್ತನು ಅನುಮತಿಸುವದಿಲ್ಲ ಎಂಬ ಭರವಸೆ ಅವನಿಗಿತ್ತು. ರೋಮಾ 8:35-39; ಯೋಹಾನ 10:28; 1 ಪೇತ್ರ 1:5 ರೊಂದಿಗೆ ಹೋಲಿಸಿ ನೋಡಿರಿ.

“*ಆ ದಿನದಲ್ಲಿ*”– ಯೇಸು ಕ್ರಿಸ್ತನ ಎರಡನೇ ಬರೋಣ. **13**

**1:13** ಪೌಲನು ತಿಮೊಥೆಯನಿಗೆ ದೇವರ ಕುರಿತಾದ ಸತ್ಯಗಳನ್ನು ಕಲಿಸಿದ್ದನು. ಯೇಸು ಕ್ರಿಸ್ತನೇ ಪೌಲನಿಗೆ ಈ ಸತ್ಯವನ್ನು ಕಲಿಸಿದ್ದನು – ಗಲಾ 1:11-12; ಎಫೆ 3:2-3. ತಿಮೊಥೆಯನು ತನ್ನ ಸ್ವಂತವಾದ ಸಿದ್ಧಾಂತಗಳ “ವಿಧಾನಗಳನ್ನು” ಮಾಡುವ ಹಾಗಿರಲಿಲ್ಲ. ನಾವೂ ಮಾಡುವ ಹಾಗಿಲ್ಲ. ದೇವರು ಒಂದೇ ಸಲ ಎಲ್ಲರಿಗಾಗಿಯೂ ಕೊಟ್ಟಿರುವ

ವಿಧಾನಗಳನ್ನು ಪ್ರತಿಯೊಬ್ಬರೂ ಅನುಸರಿಸಬೇಕು. ಒಂದುವೇಳೆ ನಾವು ಬೋಧಿಸುವದು ಮತ್ತು ಉಪದೇಶಿಸುವದು ಮಾಡುವದಾದರೆ ಸತತವಾಗಿ ಈ ವಿಧಾನವನ್ನು ಅನುಸರಿಸಬೇಕು ಹಾಗೂ ಅದರ ಪ್ರಕಾರವೇ ನಮ್ಮ ಸೇವೆಯನ್ನು ನಿರ್ಮಿಸಿಕೊಳ್ಳಬೇಕು. ಒಂದುವೇಳೆ ನಾವು ಹಾಗೆ ಮಾಡಲಿಲ್ಲವೆಂದರೆ, ದೇವರ ದೃಷ್ಟಿಯಲ್ಲಿ ಅದು ಒಡೆದುಹೋಗುವಂತೆ ಮಾಡಿಕೊಳ್ಳುತ್ತೇವೆ (ಮಾನವರ ದೃಷ್ಟಿಯಲ್ಲಿ ಎಷ್ಟೇ ಯಶಸ್ವಿಯಾಗಿದ್ದರೂ ಯಾವುದೇ ಪ್ರಯೋಜನವಿಲ್ಲ).

*"ನಂಬಿಕೆ ಮತ್ತು ಪ್ರೀತಿ"*– ನಾವು ಸಜೀವವಾದ ನಂಬಿಕೆಯೊಂದಿಗೆ ಪೌಲನ ಬೋಧನೆಗಳನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕು. ಅದು ನಮಗೆ ನಿರ್ಜೀವವಾದ ಸಂಪ್ರದಾಯವಾಗಬಾರದು (ಯೋಹಾನ 5:38-40,45-47 ರೊಂದಿಗೆ ಹೋಲಿಸಿ ನೋಡಿರಿ). ಮತ್ತು ನಾವು ಸತ್ಯವನ್ನು ಪ್ರೀತಿಯಿಂದ ಬಿಗಿಯಾಗಿ ಹಿಡಿದುಕೊಳ್ಳಬೇಕು. ಸ್ವಸ್ಥವಾದ ಸಿದ್ಧಾಂತವುಳ್ಳವರಾಗಿದ್ದು "ನಂಬಿಕೆಗಾಗಿ ಹೋರಾಡುವವರಾಗಿದ್ದರೆ ಸಾಲದು" (ಯೂದ 3). ನಮಗೆ ಏನೇ ಇದ್ದರೂ ಅದರೊಂದಿಗೆ ಪ್ರೀತಿ ಇಲ್ಲದೆ ಹೋದರೆ ನಾವು ಏನೂ ಇಲ್ಲದವರಾಗಿದ್ದೇವೆ – 1 ಕೊರಿಂಥ 13:1-3.

*"ಕ್ರಿಸ್ತನಲ್ಲಿ"*– ವ 9. **14**

**1:14** ದೇವರು ಪ್ರಕಟಿಸಿರುವ ಸತ್ಯ "ಶ್ರೇಷ್ಠವಾದದ್ದಾಗಿದೆ", ಅದುವೇ ಸ್ವಸ್ಥ ಬೋಧನೆಯ ವಿಧಾನವೂ ಆಗಿದೆ. ಯೇಸು ಕ್ರಿಸ್ತನ ಸೇವಕರು ಅದನ್ನು ಯಾಕೆ ಕಾಪಾಡಿಕೊಳ್ಳಬೇಕು? ಯಾಕಂದರೆ ಅದನ್ನು ಅವರಿಂದ ಮತ್ತು ಸಭೆಯಿಂದ ತೆಗೆದುಕೊಳ್ಳಲು ಅನೇಕರು ಪ್ರಯತ್ನಿಸುತ್ತಾರೆ.

*"ಪವಿತ್ರಾತ್ಮನು"*– ಯೋಹಾನ 14:16-17 ರ ನೋಟ್ ನೋಡಿರಿ. ನಮ್ಮ ಬಡವಾದ ಸಂಪನ್ಮೂಲಗಳು, ನಮ್ಮ ಸ್ವಂತ ವಾದಗಳು ಅಥವಾ ಜ್ಞಾನ ಅಥವಾ ಬಲದಿಂದ ತನ್ನ ಸತ್ಯವನ್ನು ಕಾಪಾಡುವಂತೆ ದೇವರು ನಮಗೆ ಹೇಳಿಲ್ಲ. ಆತನು ತನ್ನ ಸೇವಕರಿಗೆ ಕೊಟ್ಟಿರುವ ಅಧಿಕಾರ ಮತ್ತು ಜ್ಞಾನ ಸ್ವಾಭಾವಿಕವಾಗಿ ಅವರಿಗೆ ಇರುವ ವಿಷಯಗಳಿಗಿಂತ ಹೆಚ್ಚು ಶಕ್ತಿಯುಳ್ಳದ್ದಾಗಿದೆ. ಮತ್ತಾಯ 10:19-20; ಲೂಕ 21:15; ಯೋಹಾನ 16:13-15; ಅಪೊ 4:13 ರೊಂದಿಗೆ ಹೋಲಿಸಿ ನೋಡಿರಿ.

*"ನಮ್ಮಲ್ಲಿ ವಾಸವಾಗಿದ್ದಾನೆ"*– ರೋಮಾ 8:9; 1 ಕೊರಿಂಥ 6:19. **15**

**1:15** ಪೌಲನು ಸೆರೆಮನೆಯಲ್ಲಿದ್ದನು ಮತ್ತು ಅಪಾಯದಲ್ಲಿದ್ದನು. ಅವನ ಜೊತೆಯಲ್ಲಿದ್ದು ಅವನಿಗೆ ಸಹಾಯ ಮಾಡಬೇಕಾಗಿದ್ದವರು ಆಗ ಅವನ ಜೊತೆಯಲ್ಲಿರದೆ ಸಹಾಯ ಮಾಡದೆ ಇರುವದು ದುಃಖದ ವಿಷಯವಾಗಿದೆ (4:16). ಮತ್ತಾಯ 26:56 ರೊಂದಿಗೆ ಹೋಲಿಸಿ ನೋಡಿರಿ.

*"ಆಸ್ಯ"*– ಅಪೊ 16:6 ನೋಡಿರಿ. **16**

**1:16** *"ಒನೇಸಿಫೊರನು"*– ಪೌಲನು 15 ನೇ ವಚನದಲ್ಲಿ ತಿಳಿಸಿರುವವರಿಗೂ ಇವನಿಗೂ ದೊಡ್ಡ ವ್ಯತ್ಯಾಸವಿದೆ. ಅವರು ಪೌಲನಿಗೆ ಸಹಾಯ ಮಾಡದಿರುವದು ಹೇಗೆ ಎಂಬದಕ್ಕೆ ಮಾರ್ಗಗಳನ್ನು ಹುಡುಕುತ್ತಾ ಇದ್ದರು; ಇವನು ಪೌಲನಿಗೆ ಸಹಾಯ ಮಾಡುವ ಸಲುವಾಗಿ ಅವನು ಎಲ್ಲಿದ್ದಾನೆಂದು ಹುಡುಕುತ್ತಾ ಇದ್ದನು. ಲೋಕದಲ್ಲಿ ಈ ಎರಡು ಬಗೆಯ ಕ್ರೈಸ್ತರು ಈಗಲೂ ಇದ್ದಾರೆ. **18**

**1:18** *"ಕರುಣೆ"*– ಪೌಲನ ಬಯಕೆ ಸತ್ಯವೇದದನುಸಾರವಾದದ್ದಾಗಿತ್ತು – ಮತ್ತಾಯ 5:7. ನಾವು ಇತರರಿಗೆ ಕರುಣೆ ತೋರದೆ ಹೋದರೆ ಅಥವಾ ಸಹಾಯ ಮಾಡದೆ ಇದ್ದರೆ ದೇವರು ನಮಗೆ ಕರುಣೆ ತೋರಲಿ ಅಥವಾ ಸಹಾಯ ಮಾಡಲಿ ಎಂದು ನಿರೀಕ್ಷಿಸುವ ಅಧಿಕಾರ ನಮಗೆ ಇಲ್ಲ.

# 2 1

**2:1** ಆತ್ಮೀಕ ಬಲ ದೇವರ ವರವಾಗಿದ್ದು ಯೇಸು ಕ್ರಿಸ್ತನಲ್ಲಿ ವಿಶ್ವಾಸಿಗಳೆಲ್ಲರಿಗೆ ಕೊಡಲಾಗಿದೆ. ಆ ಬಲವನ್ನು ಉಪಯೋಗಿಸಿಕೊಳ್ಳುವದು ಹೇಗೆ ಎಂಬದನ್ನು ನಾವು ಕಲಿತುಕೊಳ್ಳಬೇಕು (ಎಫೆ 1:3,19; 3:16,20; 6:10; 2 ಕೊರಿಂಥ 12:9-10; ಯೆಶಾಯ 40:31). **2**

**2:2** ಭೂಲೋಕದಾದ್ಯಂತ ತನ್ನ ಸತ್ಯವನ್ನು ಪ್ರಚುರಪಡಿಸಲು ದೇವರು ಈ ಮಾರ್ಗವನ್ನು ಯೋಜನೆ ಮಾಡಿದ್ದಾನೆ. ಪೌಲನು ತಿಮೊಥೆಯನಿಗೆ ಕಲಿಸಿದನು (1:13); ತಿಮೊಥೆಯನು ಇತರರಿಗೆ ಕಲಿಸಬೇಕು ಮತ್ತು ಅವರು ಉಳಿದವರಿಗೆ ಕಲಿಸಬೇಕು. ಮತ್ತಾಯ 28:19-20 ರೊಂದಿಗೆ ಹೋಲಿಸಿ ನೋಡಿರಿ.

*"ನಂಬಿಗಸ್ತ ಮನುಷ್ಯರು"*– ನಂಬಿಕೆಗೆ ಅರ್ಹರಲ್ಲದ ಜನರಿಗೆ ಪ್ರಾಮುಖ್ಯವಾದ ವಿಷಯಗಳನ್ನು ಒಪ್ಪಿಸುವದರಿಂದ ಯಾವುದೇ ಉಪಯೋಗವಿಲ್ಲ. ಮತ್ತಾಯ 24:45-51; 1 ತಿಮೊ 1:12; 1 ಕೊರಿಂಥ 4:1-2 ರೊಂದಿಗೆ ಹೋಲಿಸಿ ನೋಡಿರಿ. **3**

**2:3** *"ಶ್ರಮೆಗಳು"*– 1:8; 3:12; ಯೋಹಾನ 16:33; ಅಪೊ 14:22.

*"ಒಳ್ಳೆಯ ಸೈನಿಕನು"*– ಎಫೆ 6:11-18. ಯೇಸು ಕ್ರಿಸ್ತನ ಆತ್ಮೀಕ ಸೈನ್ಯದಲ್ಲಿ ವಿಶ್ವಾಸಿಗಳೆಲ್ಲರೂ ಸೈನಿಕರಾಗಿದ್ದಾರೆ. ಆದ್ದರಿಂದ ನಾವು ಉತ್ತಮರಾಗಿರಲು ಪ್ರಯತ್ನಿಸಬೇಕು ಮತ್ತು ಕರ್ತವ್ಯನಿರತರಾಗಿರುವಾಗ ನಮಗೆ ಏನೇ ಎದುರಾದರೂ ಧೈರ್ಯದಿಂದ ಅವುಗಳನ್ನು ಎದುರಿಸಬೇಕು. ನಾಯಕತ್ವದ ಸ್ಥಾನಗಳಿಗೆ ಯೇಸು ಕ್ರಿಸ್ತನು ಯಾರನ್ನು ಕರೆದಿದ್ದಾನೋ ಅವರ ವಿಷಯದಲ್ಲಿ ಇದು ಸತ್ಯವಾಗಿದೆ. ನಾವು ಗುಣಗುಟ್ಟಬಾರದು ಅಥವಾ ದೂರು ಹೇಳಬಾರದು ಅಥವಾ ಯಾವುದೇ ಪರಿಸ್ಥಿತಿಯಲ್ಲಿಯೂ ಕಷ್ಟಗಳಿಗೆ ಒಳಗಾಗುವದನ್ನು ತಪ್ಪಿಸಲು ಪ್ರಯತ್ನಿಸಬಾರದು. **4**

**2:4** *"ಸಿಕ್ಕಿಕೊಳ್ಳದೆ"*– ವಿಶ್ವಾಸಿಗಳು ಅಥವಾ ಸುವಾರ್ತಾ ಬೋಧಕರು ಲೌಕಿಕ ಉದ್ಯೋಗಗಳಿಗೆ ಹೋಗುವದರಲ್ಲಿ ಮತ್ತು ಜೀವನೋಪಾಯಕ್ಕಾಗಿ ದುಡಿಯುವದರಲ್ಲಿ ಯಾವುದೇ ತಪ್ಪಿಲ್ಲ (ಅಪೊ 18:3; 20:34-35; 1 ಥೆಸ 4:11-12; 2 ಥೆಸ 3:7-10; ತೀತ 3:14). ಆದರೆ ನಾವು ಅವುಗಳಲ್ಲಿ ಅಥವಾ ಲೋಕದ ಯಾವುದೇ ವ್ಯವಹಾರಗಳಲ್ಲಿ ಸಿಕ್ಕಿಕೊಳ್ಳುವದು ತಪ್ಪು ಯಾಕಂದರೆ ಅವುಗಳಲ್ಲಿ ಸಿಕ್ಕಿಕೊಳ್ಳುವದರಿಂದ ಯೇಸು ಕ್ರಿಸ್ತನ ಒಳ್ಳೆಯ ಸೈನಿಕರಾಗಿರಲು ನಾವು ವಿಫಲರಾಗುತ್ತೇವೆ. ನಾವು ನಮ್ಮ ಅಧಿಕಾರಿಯನ್ನು (ಯೇಸು ಕ್ರಿಸ್ತನನ್ನು) ಎಲ್ಲವುಗಳಿಗಿಂತ ಹೆಚ್ಚಾಗಿ ಮೆಚ್ಚಿಸಲು ಪ್ರಯತ್ನಿಸುವವರಾಗಿರಬೇಕು – 2 ಕೊರಿಂಥ 5:9; ಗಲಾ 1:10; ಕೊಲೊ 1:10; 1 ಥೆಸ 4:1. ಒಂದುವೇಳೆ ನಾವು ಲೌಕಿಕ ಉದ್ಯೋಗದಲ್ಲಿದ್ದರೂ ಅಥವಾ ಲೋಕದ ಯಾವುದೋ ವ್ಯವಹಾರದಲ್ಲಿ ಭಾಗಿಯಾಗಿದ್ದರೂ ನಾವು ಯೇಸು ಕ್ರಿಸ್ತನ ಆದೇಶಗಳನ್ನು ಪಾಲಿಸುವ ಆತನ ಸೈನಿಕರಾಗಿದ್ದೇವೆ ಎಂಬದನ್ನು ಮರೆಯಬಾರದು. **5**

**2:5** *"ರಂಗಸ್ಥಳದಲ್ಲಿ ಹೋರಾಡುವವನು"*– ವಿಶ್ವಾಸಿಗಳು ಸಹ ಆತ್ಮೀಕ ರಂಗಸ್ಥಳದಲ್ಲಿ ಹೋರಾಡುವವರಾಗಿದ್ದಾರೆ – 1 ಕೊರಿಂಥ 9:24-27; ಗಲಾ 5:7; ಫಿಲಿಪ್ಪಿ 3:13-14; ಇಬ್ರಿ 12:1. ಜಯಶಾಲಿಗಳಿಗೆ ಜಯಮಾಲೆಗಳು ಸಿಗುತ್ತವೆ – 4:8; ಯಾಕೋಬ 1:12; 1 ಪೇತ್ರ 5:4; ಪ್ರಕ 2:10. ಆದರೆ "ನಿಯಮವನ್ನು" –ಉಲ್ಲಂಘಿಸುವವರು ಜಯಶಾಲಿಗಳಾಗಲು ಆಗುವದಿಲ್ಲ. ಆತ್ಮೀಕ ನಿಯಮಗಳಿರುತ್ತವೆ, ತರಭೇತಿ ಮತ್ತು ಕ್ರಮಶಿಕ್ಷಣಗಳಿರುತ್ತವೆ ವಿಶ್ವಾಸಿಗಳು ಅವೆಲ್ಲವುಗಳನ್ನು ಅನುಸರಿಸಬೇಕು. ಒಂದುವೇಳೆ ಅವರು ಅನುಸರಿಸದೆ ಹೋದರೆ ತಾವು ಗಳಿಸಬಹುದಾದ ಬಹುಮಾನಗಳನ್ನು ಕಳೆದುಕೊಳ್ಳುತ್ತಾರೆ – 1 ಕೊರಿಂಥ 9:27; ಕೊಲೊ 2:18; 2 ಯೋಹಾನ 8; ಪ್ರಕ 3:11. **6**

**2:6** 1 ಕೊರಿಂಥ 9:10; ಗಲಾ 6:9; ಯೋಹಾನ 4:36; ಕೀರ್ತನೆ 126:5-6. "ಕಠಿಣಪರಿಶ್ರಮಕ್ಕೆ" ಪೌಲನು ಇಲ್ಲಿ ಆದ್ಯತೆಯನ್ನು ಕೊಡುತ್ತಾ ಇದ್ದಾನೆ. 1 ಕೊರಿಂಥ 15:58 ರೊಂದಿಗೆ ಹೋಲಿಸಿ ನೋಡಿರಿ. **7**

**2:7** ದೇವರು ಕೊಡುವ ಯಾವುದೇ ಪ್ರಕಟನೆಯನ್ನಾದರೂ ಅರ್ಥಮಾಡಿಕೊಳ್ಳಬೇಕು ಮತ್ತು ಅಳವಡಿಸಿಕೊಳ್ಳಬೇಕೆಂದರೆ ಅವಶ್ಯವಾಗಿರುವ ಎರಡು ಕಾರ್ಯಗಳನ್ನು ಇಲ್ಲಿ ನೋಡಬಹುದು. ನಾವು ಆಲೋಚಿಸಬೇಕು, ಪ್ರತಿಬಿಂಬಿಸಬೇಕು, ಧ್ಯಾನ ಮಾಡಬೇಕು ಮತ್ತು ಕರ್ತನು ಒಳನೋಟ, ವಿವೇಚನೆ, ಜ್ಞಾನವನ್ನು ಕೊಡಬೇಕು. ಕೀರ್ತನೆ 1:2; 1 ಪೇತ್ರ 1:13; ಎಫೆ 1:18; ಫಿಲಿಪ್ಪಿ 1:9; ಕೊಲೊ 1:9; ಯಾಕೋಬ 1:5 ರೊಂದಿಗೆ ಹೋಲಿಸಿ ನೋಡಿರಿ. **8**

- **2:8** ರೋಮಾ 1:3-4; ಮತ್ತಾಯ 28:6.

*"ಜ್ಞಾಪಕಮಾಡಿಕೋ"*– ನಮ್ಮ ಚಿಂತೆ ಮತ್ತು ಭೋಗಗಳು, ಕಷ್ಟಗಳು ಮತ್ತು ವಿಶ್ರಮಗಳ ನಡುವೆ ನಾವು ಆತನನ್ನು ಮರೆತುಹೋಗುವ ಸಾಧ್ಯತೆಯಿರುವದರಿಂದ ಈ ಪ್ರಬೋಧನೆ ನಮಗೆ

ಅವಶ್ಯವಾಗಿದೆ. ಧರ್ಮೋ 6:12; 8:11 ರೊಂದಿಗೆ ಹೋಲಿಸಿ ನೋಡಿರಿ. ನಾವು ಆತನನ್ನು ಯಾವಾಗಲೂ ನಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು, ನಮ್ಮ ಆಲೋಚನೆಗಳನ್ನು ಆತನ ಮೇಲೆ ನೆಲೆಗೊಳಿಸಬೇಕು – ಕೊಲೊ 3:1-2; ಇಬ್ರಿ 3:1; 12:2-3. ಸಮಾಧಾನ, ಶಕ್ತಿ ಮತ್ತು ಜಯ ಹೊಂದಲು ಇದೊಂದೇ ಮಾರ್ಗವಾಗಿದೆ.

"*ನನ್ನ ಸುವಾರ್ತೆ*"– ರೋಮಾ 2:16; 16:25; 1 ಕೊರಿಂಥ 15:1-4. **9**

**2:9** 1:12 ನೋಡಿರಿ. ಸುವಾರ್ತೆಯ ವಿರೋಧಿಗಳು ನಂಬುತ್ತಾರೆ ಎಂದು (ಬಹುತೇಕರಲ್ಲಿರುವ) ಒಂದು ತಪ್ಪು ತಿಳುವಳಿಕೆಯಾಗಿದೆ. ದೇವಸೇವಕರನ್ನು ಬಂಧಿಸಿದರೆ ಅಥವಾ ಅವರನ್ನು ನಾಶಮಾಡುವ ಮೂಲಕ ಸುವಾರ್ತೆಯನ್ನು ನಾಶಮಾದಿದರೆ ದೇವರ ವಾಕ್ಯಗಳನ್ನು ಕಟ್ಟುಹಾಕಬಹುದು ಎಂಬದಾಗಿ ಅವರು ಆಲೋಚಿಸುತ್ತಾರೆ. ನಿಜವಾಗಿ ಹೇಳುವದಾದರೆ ಅವರು ಇಂಥ ವಿಧಾನಗಳ ಮೂಲಕ ಸುವಾರ್ತೆಯ ಪ್ರಚಾರಕ್ಕೆ ಸಾಧನಗಳನ್ನು ಅವರಿಗೇ ಗೊತ್ತಿಲ್ಲದೆ ಸಿದ್ಧಮಾಡುತ್ತಾ ಇದ್ದಾರೆ (ಫಿಲಿಪ್ಪಿ 1:12-14; ಅಪೊ 8:3-4). ಬೀಜ ಬಿಡುವ ಗಿಡವನ್ನು ಹೊಡೆಯುವದಾದರೆ ಬೀಜಗಳು ಚದರುತ್ತವೆ. **10**

**2:10** (ನಮ್ಮ ಮುಂದೆ ಇಟ್ಟಿರುವ ಮಾದರಿಯಾಗಿರುವ) ಪೌಲ ತನಗಾಗಿ ಜೀವಿಸುವವನಾಗಿರಲಿಲ್ಲ ಅಥವಾ ತನ್ನ ನಿಮಿತ್ತ ಶ್ರಮೆಗಳನ್ನು ಎದುರಿಸುತ್ತಾ ಇರಲಿಲ್ಲ, ಬದಲಾಗಿ ಯೇಸು ಕ್ರಿಸ್ತನ ನಿಮಿತ್ತ ಎಲ್ಲವನ್ನು ಸಹಿಸಿಕೊಳ್ಳುತ್ತಾ ಇದ್ದನು. 1 ಕೊರಿಂಥ 9:19-23; 10:33—11:1; ಅಪೊ 20:24 ರೊಂದಿಗೆ ಹೋಲಿಸಿ ನೋಡಿರಿ.

"*ದೇವರಾರಿಸಿಕೊಂಡವರು*"– ಮತ್ತಾಯ 24:22,24,31; ರೋಮಾ 11:7; ತೀತ 1:1. ಇಲ್ಲಿ ಪೌಲನ ಮಾತುಗಳ ಅರ್ಥ ರಕ್ಷಣೆ ಹೊಂದಲು ದೇವರಾರಿಸಿಕೊಂಡಿರುವವರು ಮತ್ತು ಆತನು ತನ್ನ ರಾಜ್ಯದೊಳಗೆ ಇನ್ನೂ ಸೇರಿಸಿಕೊಳ್ಳದೆ ಇರುವವರು. ಯೋಹಾನ 6:37; ರೋಮಾ 8:29; ಎಫೆ 1:4; 1 ಪೇತ್ರ 1:1-2 ರೊಂದಿಗೆ ಹೋಲಿಸಿ ನೋಡಿರಿ.

"*ನಿತ್ಯ ಪ್ರಭಾವ*"– ಯೋಹಾನ 17:5,24; ರೋಮಾ 5:2; 8:17-18. **11**

**2:11** "*ಆತನೊಡನೆ ಸತ್ತಿದ್ದರೆ*"– ರೋಮಾ 6:2-8; ಗಲಾ 2:20. **12**

**2:12** "*ಸಹಿಸಿಕೊಳ್ಳುವವರಾಗಿದ್ದರೆ*"– ವ 10; ಮತ್ತಾಯ 10:22; 24:13; ರೋಮಾ 12:12; 1 ಕೊರಿಂಥ 13:7 - ಗ್ರೀಕ್ ಪದವು ತಾಳ್ಮೆ ಅಥವಾ ಧೈರ್ಯದ ಆಲೋಚನೆಯನ್ನು ಹೊಂದಿದೆ. ತಾಳ್ಮೆಯಿಂದ, ಧೈರ್ಯವಾಗಿ ಯೇಸು ಕ್ರಿಸ್ತನಿಗಾಗಿ ಸಹಿಸಿಕೊಳ್ಳುವದನ್ನು ಆತನು ನಮಗೆ ಸಹಿಸಿಕೊಳ್ಳಲು ಕೊಟ್ಟಿರುವದೇ ನಂಬಿಕೆಯು ಯಥಾರ್ಥವಾದದ್ದು ಎಂಬದಕ್ಕೆ ಪುರಾವೆಯಾಗಿದೆ.

"*ಆಳ್ವಿಕೆ*"– ಮತ್ತಾಯ 19:28; ಲೂಕ 1:33; ಪ್ರಕ 5:10; 20:6; 22:5. ಯೇಸು ಕ್ರಿಸ್ತನ ನಿಮಿತ್ತ ಶ್ರಮೆಗಳನ್ನು ಅನುಭವಿಸಲು ಯಾರು ಸಿದ್ಧರಾಗಿರುವದಿಲ್ಲವೋ ಅವರಿಗೆ ಈ ವಾಗ್ದಾನವನ್ನು ಕೊಡಲಾಗಿಲ್ಲ.

*"ಆತನವರಲ್ಲ ಎಂದು ಹೇಳಿದರೆ"*– ಮತ್ತಾಯ 10:33; ಲೂಕ 12:9. ಇಲ್ಲಿ ಪೌಲನು ಪೇತ್ರನು ಅಲ್ಲಗಳೆದಂಥ ತಾತ್ಕಾಲಿಕವಾದ ಅಲ್ಲಗಳೆಯುವಿಕೆಯ ಬಗ್ಗೆ ಮಾತನಾಡುತ್ತಾ ಇಲ್ಲ (ಮತ್ತಾಯ 26:34,75) ಬದಲಾಗಿ ಜೀವಿತದ ಮಾರ್ಗವನ್ನು ತ್ಯಜಿಸುವದರ ಬಗ್ಗೆ ಮಾತನಾಡುತ್ತಾ ಇದ್ದಾನೆ. **13**

**2:13** ರೋಮಾ 3:3-4; ಕೀರ್ತನೆ 57:10; 89:1,8,14,33; 117:2; ತೀತ 1:2. ರಕ್ಷಣೆ ಹೊಂದಬೇಕೆಂಬ ವಿಶ್ವಾಸಿಯ ನಿರೀಕ್ಷೆಯು ದೇವರ ನಂಬಿಗಸ್ತಿಕೆಯ ಮೇಲೆ ಆಧಾರವಾಗಿದೆಯೇ ಹೊರತು, ಅವನ ಮೇಲೆ ಅಲ್ಲ. ದೇವರು ತನ್ನ ವಾಕ್ಯ ಅಥವಾ ತನ್ನ ಸ್ವಭಾವಕ್ಕೆ ವಿರುದ್ಧವಾಗಿ ಎಂದಿಗೂ ನಡೆದುಕೊಳ್ಳುವದಿಲ್ಲ. **14**

**2:14** ಸಭಾಪಾಲಕ ಅಥವಾ ಬೋಧಕನ ಎರಡು ಕರ್ತವ್ಯಗಳನ್ನು ನಾವು ಇಲ್ಲಿ ನೋಡಬಹುದು – ಜ್ಞಾಪಕಪಡಿಸುವದು ಮತ್ತು ಎಚ್ಚರಿಸುವದು. ದೇವರ ಜನರಿಗೆ ಎರಡೂ ಬೇಕಾಗಿದೆ ಅಪೊ 20:31; ರೋಮಾ 15:15; 1 ಕೊರಿಂಥ 4:14; 15:1; ಗಲಾ 5:21; 2 ಥೆಸ 3:15; 2 ಪೇತ್ರ 1:12-13,15; 3:1.

*"ಯಾವ ಪ್ರಯೋಜನಕ್ಕೂ ಬಾರದ ವಾಗ್ವಾದಗಳು"*– ಕೆಲವು ಮಾತುಗಳು ಬಹಳ ಪ್ರಾಮುಖ್ಯವಾಗಿರುತ್ತವೆ – ದೇವರು, ಯೇಸು ಕ್ರಿಸ್ತನು, ಸತ್ಯ, ನಂಬಿಕೆ, ಪ್ರೀತಿ, ರಕ್ಷಣೆ, ಇತ್ಯಾದಿ. ಈ ಪದಗಳು ಪ್ರತಿನಿಧಿಸುವ ವಾಸ್ತವಗಳಿಗೆ ಪ್ರಾಣ ಕೊಡುವ ಅರ್ಹವಾಗಿದೆ. ನಿಸ್ಸಂದೇಹವಾಗಿ ಇಲ್ಲಿ ಪೌಲನ ಮಾತುಗಳ ಅರ್ಥವೇನೆಂದರೆ ಪ್ರಾಮುಖ್ಯವೇ ಇಲ್ಲದ ವಿಷಯಗಳಿಗಾಗಿ ಕಿತ್ತಾಡುವದು ಎಂಬದಾಗಿದೆ. ವ 23; 4:4; 1 ತಿಮೊ 1:4; 4:7; 6:4 ರೊಂದಿಗೆ ಹೋಲಿಸಿ ನೋಡಿರಿ. ಆದರೆ ದೊಡ್ಡ ವಿಷಯಗಳಿಗಾಗಿಯೂ ಜಗಳವಾಡುವದು ದೇವರ ಸೇವಕರಿಗೆ ಯೋಗ್ಯವಲ್ಲ (ವ 24,25), ಆದರೂ ಅವರು ಆಸಕ್ತಿಯಿಂದ ಅವುಗಳನ್ನು ಪ್ರಕಟಿಸಬೇಕು ಮತ್ತು ದೇವರು ಕೊಡುವ ಶಕ್ತಿಯಿಂದ ಅವುಗಳಿಗಾಗಿ ಹೋರಾಡಬೇಕು. **15**

**2:15** ಪ್ರತಿಯೊಬ್ಬ ಬೋಧಕ, ಸಭಾಪಾಲಕ, ಸೌವಾರ್ತಿಕ ಅಥವಾ ಉಪದೇಶಕನಿಗೆ ಇದು ಅದ್ಭುತವಾದ ಸೂಚನೆಯನ್ನು ಕೊಡಲಾಗಿದೆ.

*"ಯೋಗ್ಯನಾಗಿ ಕಾಣಿಸಿಕೊಳ್ಳುವದು"*– ರೋಮಾ 16:10; 1 ಕೊರಿಂಥ 11:19; 2 ಕೊರಿಂಥ 10:18; ಗಲಾ 1:10; 1 ಥೆಸ 2:4.

*"ಅವಮಾನಕ್ಕೆ ಗುರಿಯಾಗುವ ಕಾರ್ಯಗಳನ್ನು ಮಾಡಬಾರದು"*– ಒಂದುವೇಳೆ ಯೇಸು ಕ್ರಿಸ್ತನ ಸೇವಕನಲ್ಲಿ ಯಾವನಾದರೂ ಸೋಮಾರಿಯಾಗಿದ್ದರೆ ಅಥವಾ ಬೇಜವಾಬ್ದಾರನಾಗಿದ್ದರೆ ಮತ್ತು ಆತನ ಸೇವೆ ಕಳಪೆ ಗುಣಮಟ್ಟದ್ದಾಗಿದ್ದರೆ ದೇವರ ಸಮ್ಮತಿಯನ್ನು ಪಡೆಯಲು ಆಗುವದಿಲ್ಲ. ನಮ್ಮ ಸೇವೆಯನ್ನು ಅತ್ಯಂತ ಎಚ್ಚರಿಕೆಯಿಂದ ಪರೀಕ್ಷಿಸಲಾಗುತ್ತದೆ – 1 ಕೊರಿಂಥ 3:12-15. ನಾವು ಅದನ್ನು ಯಾವ ರೀತಿ ಮಾಡಬೇಕು ಅಂದರೆ ದೇವರ ಎದುರಿನಲ್ಲಿ ನಿಲ್ಲುವಾಗ ನಮಗೆ ಯಾವುದೇ ರೀತಿಯಲ್ಲಿ

ಅವಮಾನವಾಗಬಾರದು.

*"ಸತ್ಯವಾಕ್ಯ"*– ಎಫೆ 1:13 ರಲ್ಲಿ; ಮತ್ತು ಕೊಲೊ 1:5 ರಲ್ಲಿ ಪೌಲನು ಇದನ್ನು ಯೇಸು ಕ್ರಿಸ್ತನ ಸುವಾರ್ತೆ ಎಂದು ವ್ಯಾಖ್ಯಾನಿಸಿದ್ದಾನೆ. ಇಲ್ಲಿ ಅವನ ಮಾತಿನ ಅರ್ಥ ಅಥವಾ ಬಹುತೇಕ, ದೇವರ ಸಂಪೂರ್ಣವಾದ ಪ್ರಕಟನೆಯು ಸತ್ಯವೇದದಲ್ಲಿದೆ. ದೇವರ ಸಮ್ಮತಿಯನ್ನು ನಾವು ದೇವರ ಸತ್ಯವನ್ನು ಸರಿಯಾಗಿ ಮತ್ತು ಯುಕ್ತವಾಗಿ ಉಪಯೋಗಿಸುವದನ್ನು ಕಲಿತುಕೊಳ್ಳಬೇಕು. ನಾವು ಅದನ್ನು ಸಂಪೂರ್ಣವಾಗಿ ಅದನ್ನು ಅರ್ಥಮಾಡಿಕೊಳ್ಳಬೇಕು, ಅದನ್ನು ಕಲಿಸಲು ಹಾಗೂ ಇತರರಿಗೆ ವಿವರಿಸಲು ಶಕ್ತರಾಗಿರಬೇಕು. ದೇವರು ಪ್ರಾಮುಖ್ಯವಾಗಿರುವ ಈ ಸಂಗತಿಯನ್ನು ನಮಗೆ ಒಪ್ಪಿಸಿದನು ಮತ್ತು ನಾವು ಅದರ ಪ್ರಕಾರ ಅಧ್ಯಯನ ಮಾಡಬೇಕು ಹಾಗೂ ಕಷ್ಟಪಡಬೇಕು.

*"ಸರಿಯಾಗಿ ಉಪದೇಶಿಸಬೇಕು"*– ಗ್ರೀಕ್ ಭಾಷೆಯಲ್ಲಿ ಒಂದೇ ಪದವನ್ನು ಉಪಯೋಗಿಸಲಾಗಿದೆ. ಮೂಲತಃ ಇದರ ಅಕ್ಷರಾರ್ಥವಾದ ಅರ್ಥ ನೇರವಾಗಿ ಹೇಳುವದು ಆದರೆ ನಿಖರವಾಗಿ ವಿವರಿಸುವದು ಎಂಬ ಅರ್ಥ ಕಾಣಿಸಿಕೊಂಡಿತು. ಪೌಲನು ಇಲ್ಲಿ ಉಪಯೋಗಿಸಿರುವದು ಸತ್ಯವೇದದ ವಾಕ್ಯಗಳನ್ನು ಮುರಿಯುವದು ಅಥವಾ ವಿಭಜಿಸುವದು ಎಂಬ ಅರ್ಥ ಬಹುತೇಕ ಅನಿಶ್ಚಿತವಾಗಿದೆ. ಇದರ ನಿಶ್ಚಯವಾದ ಅರ್ಥ ಅವುಗಳನ್ನು ನಿಖರವಾಗಿ, ಸರಿಯಾಗಿ ಅಥವಾ ನೇರವಾಗಿ ಉಪಯೋಗಿಸುವದು ಎಂಬದಾಗಿದೆ. **16**

**2:16** ವಚನ 14; 1 ತಿಮೊ 1:6; 6:20. **17**

**2:17** *"ಕೊಳಕು ಹುಣ್ಣು"*– ಇದು ದೇಹದ ಅಂಗಾಂಶ ಸಾಯುವದಾಗಿದೆ. ರಕ್ತ ಚಲನೆಯು ಸ್ಥಗಿತವಾಗುವಾಗ ಇದು ಸಂಭವಿಸುತ್ತದೆ. ಕಾಲನ್ನು ಸಂಪೂರ್ಣವಾಗಿ ಕತ್ತರಿಸಿ ತೆಗೆದುಹಾಕುವ ತನಕ ಅದು ಕಾಲುಗಳಿಗೆ ಸಂಪೂರ್ಣವಾಗಿ ಹರಡಿಕೊಳ್ಳುತ್ತದೆ. ಒಂದುವೇಳೆ ನಿರ್ಲಕ್ಷಿಸಿದರೆ ಇಡೀ ದೇಹವೇ ತೊಂದರೆಗೊಳಪಡುತ್ತದೆ. ಸುಳ್ಳು ಬೋಧನೆಯು ಇದಕ್ಕೆ ಸಮಾನವಾಗಿದೆ. ಒಂದುವೇಳೆ ಸಭೆಯಲ್ಲಿ ಅಥವಾ ಸಂಸ್ಥೆಯಲ್ಲಿ ಹರಡಿಕೊಳ್ಳಲು ಅದಕ್ಕೆ ಅನುಮತಿ ಕೊಡುವದಾದರೆ ಕ್ರಮೇಣವಾಗಿ ಆತ್ಮೀಕ ಮರಣ ಉಂಟಾಗುವದಕ್ಕೆ ಅದು ಕಾರಣವಾಗುತ್ತದೆ. ಈ ಕಾರಣದಿಂದಲೇ ಅದಕ್ಕೆ ಕಾಲಿಡುವಷ್ಟು ಅವಕಾಶ ಕೊಡಬಾರದು. **18**

**2:18** *"ಸತ್ಯಭ್ರಷ್ಟರು"*– 1 ತಿಮೊ 1:6,19,20; 6:10,21. ಸತ್ತವರು ಭವಿಷಯದಲ್ಲಿ ಎದ್ದು ಬರುವರು ಎಂಬದು ಯೇಸು ಕ್ರಿಸ್ತನ ಮತ್ತು ಆತನ ಅಪೊಸ್ತಲರ ಸ್ಪಷ್ಟವಾದ ಬೋಧನೆಯಾಗಿದೆ – ಯೋಹಾನ 5:28-29; 1 ಕೊರಿಂಥ 15:20-23. ಅದೆಲ್ಲಾ ಈಗ ಗತಿಸಿಹೋಗಿವೆ ಎಂದು ಹೇಳುವ ಮೂಲಕ ಈ ಸುಳ್ಳು ಬೋಧಕರು ಈ ಬೋಧನೆಯನ್ನು ಅಲ್ಲಗಳೆಯುವ ಧೈರ್ಯ ಮಾಡಿದರು. ಪುನರುತ್ಥಾನವು ಆತ್ಮೀಕತೆ ಮಾತ್ರವಾಗಿದೆ – ಮಾನವ ಆತ್ಮವು ಈಗ ಸಜೀವವಾಗುತ್ತದೆ, ಅವನ ದೇಹ ಭವಿಷ್ಯದಲ್ಲಿ ಎದ್ದೇಳುವದಿಲ್ಲ ಎಂಬದಾಗಿ ಅವರು ಹೇಳುತ್ತಾ ಇದ್ದರು.

*“ಕೆಡಿಸುವವರಾಗಿದ್ದಾರೆ”*– ಸುಳ್ಳು ಬೋಧಕರು ಹೆಚ್ಚು ಗೊಂದಲಗಳನ್ನು ಉಂಟುಮಾಡುತ್ತಾ ಇದ್ದರು ಮತ್ತು ಬಹು ಸಮಯದಿಂದ ಕೆಲವು ಕ್ರೈಸ್ತರಿಗೆ ಏನು ನಂಬಬೇಕು ಎಂಬದೇ ಗೊತ್ತಿರಲಿಲ್ಲ. ಆದರೆ ಒಂದುವೇಳೆ ಅವರ ನಂಬಿಕೆ ಯಥಾರ್ಥವಾಗಿದ್ದರೆ ಅದು ನಾಶವಾಗುವದಿಲ್ಲ. **19**

**2:19** ಸುಳ್ಳು ಬೋಧಕರು ಏನೇ ಮಾಡಿದರೂ ಯೇಸು ಕ್ರಿಸ್ತನ ನಿಜವಾದ ಸಭೆಯನ್ನು ಅಥವಾ ಆತನ ಜನರನ್ನು ಹಾಳು ಮಾಡಲು ಆಗುವದಿಲ್ಲ. ಅಸ್ಥಿವಾರವನ್ನು ಸ್ಥಿರವಾಗಿರಿಸುವದು ಮತ್ತು ತನ್ನ ಜನರು ನಂಬಿಕೆಯಲ್ಲಿ ಮುಂದುವರೆಯುವಂತೆ ಮಾಡುವದು ಹೇಗೆ ಎಂಬದು ದೇವರಿಗೆ ಗೊತ್ತಿದೆ (ಮತ್ತಾಯ 16:18; ಲೂಕ 22:31,33; 1 ಪೇತ್ರ 1:4-5; 2 ಪೇತ್ರ 2:9).

*“ತನ್ನವರು”*– ಯೋಹಾನ 6:37; 17:6; 1 ಕೊರಿಂಥ 6:19-20. ಕೆಟ್ಟತನವನ್ನು ಮಾಡುತ್ತಾ ತನ್ನನ್ನು ಕ್ರೈಸ್ತನೆಂದು ಹೇಳಿಕೊಳ್ಳುವವನಿಂದ “ದೂರವಿರಬೇಕು” ಅವನ ನಂಬಿಕೆಯ ವಾಸ್ತವದ ಬಗ್ಗೆ ಸಂದೇಹಪಡಲು ಯಾವುದೇ ಕಾರಣವಿಲ್ಲ. ರೋಮಾ 8:13-14; 1 ಕೊರಿಂಥ 6:9; ಗಲಾ 5:24; ಎಫೆ 5:5-6; 1 ಯೋಹಾನ 2:4,6; 3:9-10 ರೊಂದಿಗೆ ಹೋಲಿಸಿ ನೋಡಿರಿ. **20-21**

**2:20-21** ಲೋಕದಲ್ಲಿರುವ ಕಣ್ಣಿಗೆ ಕಾಣುವ ಸಭೆಯಲ್ಲಿ ವಿವಿಧ ರೀತಿಯ ಜನರಿದ್ದಾರೆ. ಕೆಲವರು ಕರ್ತನಿಗೆ ಸೇರಿದವರಾಗಿದ್ದಾರೆ ಮತ್ತು ಅವರು ಯಾರು ಎಂಬದನ್ನು ಆತನು ಬಲ್ಲವನಾಗಿದ್ದಾನೆ. ಕೆಲವರು ಆತನಿಗೆ ಸೇರದವರಾಗಿದ್ದಾರೆ ಮತ್ತು ಅವರು ಯಾರು ಎಂಬದನ್ನೂ ಆತನು ಬಲ್ಲವನಾಗಿದ್ದಾನೆ (ಮತ್ತಾಯ 13:24-30,36-43,47-50). ಇಲ್ಲಿ ಪೌಲನು ಈ ಎರಡು ರೀತಿಯ ಜನರನ್ನು ಮನೆಯಲ್ಲಿರುವ ಎರಡು ರೀತಿಯ ಪಾತ್ರೆಗಳು ಅಥವಾ ವಸ್ತುಗಳಿಗೆ ಹೋಲಿಸಿದ್ದಾನೆ. ರೋಮಾ 9:21 ರೊಂದಿಗೆ ಹೋಲಿಸಿ ನೋಡಿರಿ. ಪೌಲನು ಹಿಂದಿನ ವಚನಗಳಲ್ಲಿ ಸಭೆಗೆ ಬರುವ ಸುಳ್ಳು ಬೋಧಕರು ಮತ್ತು ಸಭೆಯಲ್ಲಿ ಕೆಟ್ಟ ಕಾರ್ಯಗಳನ್ನು ಅಭ್ಯಾಸ ಮಾಡುವವರು ಹೀನವಾದ ಬಯಕೆಗೆ ಉಪಯೋಗಿಸುವ ಪಾತ್ರೆಗಳಾಗಿದ್ದಾರೆ. ಸತ್ಯವಂತರಾಗಿರುವ ದೇವ ಜನರು ಅವರ ಸಹವಾಸದಲ್ಲಿ ಇರಬಾರದು (3:5). ಒಂದುವೇಳೆ ನಾವು ದೇವರು ಬಯಸುವಂಥ ಉತ್ತಮವಾದ ಕಾರ್ಯಗಳಿಗೆ ಬಳಕೆಯಾಗುವ ಪಾತ್ರೆಯಾಗಿರ ಬೇಕಾದರೆ ಈ ವಾಕ್ಯದಲ್ಲಿ ಆತನು ಹೇಳಿರುವ ಕಾರ್ಯವನ್ನು ಮಾಡುವವರಾಗಿರಬೇಕು. ಒಂದುವೇಳೆ ನಾವು ಮಾಡಲಿಲ್ಲವೆಂದರೆ, ನಾವು ಭ್ರಷ್ಟತೆಗೆ ಒಳಗಾಗುವ ಅಪಾಯದಲ್ಲಿರುವವರಾಗಿದ್ದೇವೆ – 1 ಕೊರಿಂಥ 15:33. **22**

**2:22** 1 ತಿಮೊ 6:11; 2 ಪೇತ್ರ 1:3-9 ನೋಡಿರಿ. ಅತ್ಯಂತ ಅಪಾಯಕಾರಿಯಾಗಿರುವಂಥ ಕೆಲವು ಕಾರ್ಯಗಳಿಂದ ನಾವು ತಪ್ಪಿಸಿಕೊಂಡು ಓಡುವವರಾಗಿರಬೇಕು. ಇಲ್ಲವಾದರೆ ಅವುಗಳೊಂದಿಗೆ ಹೋರಾಡಿ ಜಯಗಳಿಸಬೇಕು. ಯೌವನಸ್ಥರೊಳಗೆ ಕೆಲವು ದುಷ್ಟ

ಆಲೋಚನೆಗಳು ಬಲವಾಗಿರುತ್ತವೆ. ಅವುಗಳಿಂದ ತಪ್ಪಿಸಿಕೊಳ್ಳಬೇಕಾದರೆ ಅವುಗಳನ್ನು ತೃಪ್ತಿಪಡಿಸುವಂಥ ಅವಕಾಶಗಳು ಎದುರಾಗುವಾಗ ಅವುಗಳಿಂದ ದೂರವಿರುವದು ಮತ್ತು ಅವುಗಳು ಎದುರಾದರೆ ತಪ್ಪಿಸಿಕೊಂಡು ಓಡುವದು.

*"ಶುದ್ಧ ಹೃದಯ"*– ಮತ್ತಾಯ 5:8. **23**

**2:23** ವಚನ 14,16. ದೇವಸೇವಕರು ತಮ್ಮ ಮುಖ್ಯ ಕಾರ್ಯಗಳಿಗೆ ಅಡ್ಡಿಪಡಿಸುವಂಥ ವಿಷಯಗಳಿಂದ ದೂರವಿರಬೇಕು ಮತ್ತು ಜಗಳವಾಡುವದರಲ್ಲಿ ಭಾಗಿಯಾಗಲೇ ಬಾರದು. **24**

**2:24** *"ಜಗಳವಾಡಬಾರದು"*– ಅಪೊ 7:26 ರಲ್ಲಿ "ಹೊಡೆದಾಡಿಕೊಳ್ಳಬಾರದು" –ಎಂದು ಈ ಗ್ರೀಕ್ ಪದವನ್ನು ಭಾಷಾಂತರ ಮಾಡಲಾಗಿದೆ. ವಿರೋಧಿಯನ್ನು ಥಳಿಸಬೇಕೆಂಬ ಏಕೈಕ ಗುರಿಯನ್ನು ಹೊಂದಿರುವ ವಾಗ್ಯುದ್ಧಗಳು ದೇವರ ಸೇವೆಯ ಅಭಿವೃದ್ಧಿಗೆ ಕಾರಣವಾಗುವದಿಲ್ಲ. ಆದರೆ ಸತ್ಯದ ಪರ ಹೋರಾಡುವದು ಮತ್ತು ಜನರನ್ನು ಕ್ರಿಸ್ತನ ಕಡೆಗೆ ನಡೆಸುವ ಸಲುವಾಗಿ ಅವರೊಂದಿಗೆ ಮಾತನಾಡುವದು ಒಳ್ಳೇಯದು ಹಾಗೂ ಅವಶ್ಯಕವಾದದ್ದು. ಅಂಥ ಪರಿಸ್ಥಿತಿಗಳು ಅನಾವಶ್ಯಕವಾದ ಜಗಳಗಳಿಗೆ ಹೋಗದಂತೆ ನಾವು ಎಚ್ಚರದಿಂದಿರಬೇಕು. ನಮ್ಮ ಹೋರಾಟವು ಸೈತಾನನ ವಿರುದ್ಧವೇ ಹೊರತು ಮನುಷ್ಯರ ವಿರುದ್ಧವಲ್ಲ – ಎಫೆ 6:12.

*"ಬೋಧಿಸುವದರಲ್ಲಿ ಪ್ರವೀಣನು"*– 1 ತಿಮೊ 3:2.

*"ಸಾಧು"*– ವಿರೋಧಿಗಳು ಕೆಲವೊಮ್ಮೆ ನೋವಾಗುವಂಥ, ವಿರೋಧಿಸುವಂಥ ಮತ್ತು ಅನಾವಶ್ಯಕವಾದಂಥ ವಿಷಯಗಳನ್ನು ಹೇಳುತ್ತಾರೆ ಹಾಗೂ ವೈಯಕ್ತಿಕವಾಗಿ ನಿಂದನೆ ಮಾಡುತ್ತಾರೆ. ಯೇಸು ಕ್ರಿಸ್ತನ ಸೇವಕರು ಅಂಥ ಕಾರ್ಯಗಳನ್ನು ತಾಳ್ಮೆಯಿಂದ ಮತ್ತು ಪ್ರೀತಿಯಿಂದ ಸಹಿಸಿಕೊಳ್ಳುವದನ್ನು ಕಲಿತುಕೊಳ್ಳಬೇಕು. **25**

**2:25** *"ನಿಧಾನದಿಂದ"*– ಮತ್ತಾಯ 11:29 ರೊಂದಿಗೆ ಹೋಲಿಸಿ ನೋಡಿರಿ. ಒಂದುವೇಳೆ ಸತ್ಯವನ್ನು ವಿರೋಧಿಸುವವರು ನಾವು ನಿಧಾನವಾಗಿ, ತಾಳ್ಮೆಯಿಂದ ಕೊಡುವ ಸೂಚನೆಗಳನ್ನು ಕೇಳದೆ ಹೋದರೆ, ಅದನ್ನು ಬೇರೆ ರೀತಿಯಲ್ಲಿ ಅವರು ಕೇಳುವ ಸಾಧ್ಯತೆಯೇ ಇಲ್ಲ. ಯೇಸು ಕ್ರಿಸ್ತನ ಸೇವಕರು ತಮ್ಮ ವಿರೋಧಿಗಳಿಗೆ ಸಲಹೆಗಳನ್ನು ಕೊಡುವಾಗ ಅವರಲ್ಲಿ ಯಾವ ನಿರೀಕ್ಷೆ ಇರಬೇಕು ಎಂಬದನ್ನು ನೋಡಿರಿ. ಮಾನವರು ಪಶ್ಚಾತ್ತಾಪಪಡುವಂತೆ ದೇವರು ಅವರಲ್ಲಿ ಕಾರ್ಯಮಾಡುತ್ತಾನೆಯೇ ಹೊರತು ನಮ್ಮ ವಾದಗಳು ಅಥವಾ ಸೂಚನೆಗಳಲ್ಲ ಎಂಬದನ್ನು ಗಮನಿಸಿರಿ (ಅಪೊ 5:31). ಇದಲ್ಲದೆ ಪಶ್ಚಾತ್ತಾಪಪಡುವ ಮೂಲಕ ಮಾತ್ರವೇ ಮಾನವರು ದೇವರ ಸತ್ಯದ ಜ್ಞಾನವನ್ನು ಹೊಂದುವರು ಎಂಬದನ್ನೂ ಗಮನಿಸಿರಿ. **26**

**2:26** *"ಸ್ವಸ್ಥಚಿತ್ತರಾದಾರು"*– ಲೂಕ 15:17 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನ ಸುವಾರ್ತೆಯನ್ನು ವಿರೋಧಿಸುವವರು ಆತ್ಮೀಕವಾಗಿ ಸ್ವಸ್ಥಚಿತ್ತವಿಲ್ಲದವರಾಗಿದ್ದಾರೆ (ಪ್ರಸಂಗಿ 9:3 ರೊಂದಿಗೆ ಹೋಲಿಸಿ ನೋಡಿರಿ). ಅವರು ತಮ್ಮ ಸ್ವಂತ ಹಿತಕ್ಕೆ

ವಿರುದ್ಧವಾಗಿಯೇ ಸ್ವಸ್ಥಚಿತ್ತವಿಲ್ಲದವರಾಗಿ ನಡೆದುಕೊಳ್ಳುತ್ತಾರೆ. ಇದಕ್ಕೆ ಕಾರಣ ಸೈತಾನನು ಅವರನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿದ್ದಾನೆ ಮತ್ತು ಅವರು ಅವನ ಸುಳ್ಳುಗಳನ್ನು ನಂಬಿದ್ದಾರೆ (ಯೋಹಾನ 8:44; ಅಪೊ 26:18; 2 ಕೊರಿಂಥ 4:4; ಎಫೆ 2:2 ರೊಂದಿಗೆ ಹೋಲಿಸಿ ನೋಡಿರಿ). ಯೇಸು ಕ್ರಿಸ್ತನ ಸೇವಕರು ತಮ್ಮನ್ನು ವಿರೋಧಿಸುತ್ತಿರುವ ದುರಾತ್ಮ ಸೇನೆಗಳ ವಿಷಯದಲ್ಲಿ ತಿಳುವಳಿಕೆಯಿಲ್ಲದವರಾಗಿರಬಾರದು. ದೇವರ ಶಕ್ತಿ ಮಾತ್ರವೇ ಮಾನವರನ್ನು ಬಿಡುಗಡೆ ಮಾಡುತ್ತದೆ ಮತ್ತು ಇದನ್ನು ನೆರವೇರಿಸಲು ದೇವರು ಸತ್ಯದ ಕುರಿತಾಗಿರುವ ನಮ್ಮ ಬೋಧನೆಯನ್ನು ಉಪಯೋಗಿಸಿಕೊಳ್ಳುತ್ತಾನೆ ಎಂಬದನ್ನು ಅವರು ಅರ್ಥಮಾಡಿಕೊಳ್ಳ ಬೇಕು.

# 3 1

**3:1** *"ಕಡೇ ದಿನಗಳಲ್ಲಿ"*– ಯಾಕೋಬ 5:3; 1 ಪೇತ್ರ 1:5; ಯೂದ 18 – ಈ ಯುಗದ ಕೊನೆಯ ಸಮಯ. ಘೋರವಾದ ಸಮಯಗಳು ಯಾವಾಗಲೂ ಇದ್ದೇ ಇರುತ್ತದೆ ಮತ್ತು ಲೋಕದಲ್ಲಿ ಜೀವಿಸಿರುವ ಪೌಲನಂಥವರು ಅದನ್ನು 2-4 ವಚನಗಳಲ್ಲಿ ವಿವರಿಸಿದ್ದಾರೆ. ರೋಮಾ 1:28-32 ರೊಂದಿಗೆ ಹೋಲಿಸಿ ನೋಡಿರಿ. ಆದರೆ ಪೌಲನು ಸಾಕ್ಷಿ ಸಮೇತವಾಗಿ ಹೇಳುವದೇನೆಂದರೆ ಸಮಯಗಳು ಕಠಿಣವಾಗಿರುತ್ತವೆ ಮತ್ತು ಅಂಥವರು ಹೊರಗೆ ಕಣ್ಣಿಗೆ ಕಾಣುವ ಸಭೆಯೊಳಗೆ ಇರುತ್ತಾರೆ (ವ 5). **2**

**3:2** "ಆಸೆಯುಳ್ಳವರು" ಈ ವಚನಗಳಲ್ಲಿ ಪ್ರಮುಖ ಪದವಾಗಿದೆ. ಕಠಿಣವಾದ ಕಾಲಗಳಲ್ಲಿರುವ ಕಠಿಣರಾದ ಜನರು "ಆಸೆಯುಳ್ಳವರಾಗಿರುತ್ತಾರೆ" –ಆದರೆ ಅದು ಸಂಪೂರ್ಣವಾದ ತಪ್ಪಾದ ರೀತಿಯದ್ದಾಗಿರುತ್ತದೆ. ಅವರ ಸ್ವಭಾವವು ದೇವರ ವಾಕ್ಯದ ಸ್ಪಷ್ಟ ಬೋಧನೆಗೆ ವಿರುದ್ಧವಾಗಿರುತ್ತದೆ. ಅವರು "ಸ್ವಾರ್ಥಚಿಂತಕರು"; "ಹಣದಾಸೆಯುಳ್ಳವರು" ಆಗಿರುತ್ತಾರೆ – ಲೂಕ 16:14; 1 ತಿಮೊ 6:10 ರೊಂದಿಗೆ ಹೋಲಿಸಿ ನೋಡಿರಿ. **4**

**3:4** *"ಭೋಗಗಳನ್ನು ಪ್ರೀತಿಸುವವರು"*– 1 ತಿಮೊ 5:6; ತೀತ 3:3; ಯಾಕೋಬ 4:3; 2 ಪೇತ್ರ 2:13. ಅವರು ಒಳ್ಳೇಯದನ್ನು ಮತ್ತು ಸರಿಯಾದದ್ದನ್ನು, ತಮ್ಮ ತಂದೆತಾಯಿಗಳನ್ನು ಹಾಗೂ ನೆರಯವರನ್ನು "ಪ್ರೀತಿಸದವರಾಗಿರುತ್ತಾರೆ". ಯೇಸು ಕ್ರಿಸ್ತನ ನಿಮಿತ್ತ ಪಾಪದ ಭೋಗಗಳನ್ನು ತ್ಯಜಿಸಲು ಅಥವ ಹಣದ ವಿಷಯದಲ್ಲಿ ಆತನಿಗೆ ವಿಧೇಯರಾಗಲು ಅಥವಾ ತಮಗೆ ನಿಜವಾಗಿಯೂ ಬೇಕಾಗಿರುವದನ್ನು ತೊರೆಯಲು ಬಯಸದವರಾಗಿರುತ್ತಾರೆ. ಅವರು ತಮ್ಮ ಮನೋಭಾವನೆಗಳು ಮತ್ತು ಕ್ರಿಯೆಗಳ ಮೂಲಕ ನಿಜವಾಗಿಯೂ ಪ್ರಾಮುಖ್ಯವಾಗಿರುವ – ದೇವರ ಪ್ರೀತಿ ತಮ್ಮಲ್ಲಿ ಇಲ್ಲ ಎಂಬದನ್ನು ತೋರಿಸುತ್ತಾರೆ (1 ಯೋಹಾನ 2:15-16; ಮತ್ತಾಯ 22:37-40; 1 ಕೊರಿಂಥ 13:1-3; 16:22). ಇದರ

ನಿಮಿತ್ತವಾಗಿ ಈ ವಚನಗಳಲ್ಲಿರುವ ಇತರೆ ದುಷ್ಟತನಗಳೆಲ್ಲವೂ ಅವರ ಹೃದಯಗಳಲ್ಲಿ ಹಾಗೂ ಮನಸ್ಸುಗಳಲ್ಲಿ ನೆಲೆಸುತ್ತವೆ. ಜನರೆಲ್ಲರ ನಡುವೆ ಬಡಾಯಿಕೊಚ್ಚಿಕೊಳ್ಳಲು ಅವರಿಗೆ ಏನೂ ಇಲ್ಲದಿದ್ದರೂ, ಅವರು ಬಡಾಯಿಕೊಚ್ಚಿಕೊಳ್ಳುತ್ತಾರೆ. ಒಂದುವೇಳೆ ಅವರನ್ನು ಗದರಿಸಿದರೆ ಅವರು ನಿಂದಿಸುವವರಾಗುತ್ತಾರೆ. ರೋಮಾ 1:21 ರಲ್ಲಿ ಇರುವವರಿಗಿಂತ ಹೆಚ್ಚು ಕೃತಜ್ಞತೆ ಏನೂ ಅವರಿಗೆ ಇರುವದಿಲ್ಲ. ಇತರರನ್ನು ಕ್ಷಮಿಸಲು ಅವರು ನಿರಾಕರಿಸುವದರಿಂದ ದೇವರ ಕ್ಷಮಾಪಣೆ ಅವರಲ್ಲಿ ಇಲ್ಲ ಎಂಬದನ್ನು ಪ್ರಕಟಿಸುತ್ತಾರೆ. ಅವರಲ್ಲಿ ಭರವಸೆಯನ್ನಿಡಲು ಅಥವಾ ಅವರು ಹೇಳುವ ವಿಷಯಗಳನ್ನು ನಂಬಲು ವಿಶ್ವಾಸಿಗಳಿಗೆ ಆಗುವದಿಲ್ಲ. ಅವರು ಆತ್ಮೀಕವಾಗಿ ಕುರುಡರು ಮತ್ತು ಮುಗ್ಧರು ಆಗಿದ್ದರೂ ನಮಗೇ ಎಲ್ಲವೂ ಗೊತ್ತು ಎಂದು ಅವರು ಯೋಚಿಸುತ್ತಾರೆ ಮತ್ತು ದೇವಭಕ್ತಿಯಲ್ಲಿರುವ ಬೋಧಕರ ಮಾತುಗಳನ್ನು ಕೇಳದವರಾಗಿರುತ್ತಾರೆ. **5**

**3:5** *"ಭಕ್ತಿಯ ವೇಷ"*– ಹೊರಗೆ ಅವರು ಕ್ರೈಸ್ತರಾಗಿರುತ್ತಾರೆ, ಒಳಗೆ ಕ್ರೂರವಾದ ತೋಳಗಳಾಗಿರುತ್ತಾರೆ (ಮತ್ತಾಯ 7:15). ಬೇರೆ ಮಾತುಗಳಲ್ಲಿ ಹೇಳುವದಾದರೆ, ಅವರು ಕಪಟಿಗಳು. ಅವರು ಕ್ರೈಸ್ತೀಯ ಭಾಷೆಯನ್ನು ಉಪಯೋಗಿಸುತ್ತಾರೆ ಆದರೆ ಅದರ ಅರ್ಥ ಅವರಿಗೆ ನಿಜವಾಗಿಯೂ ಗೊತ್ತಿರುವದಿಲ್ಲ. ಪಾಪಿಗಳನ್ನು ರಕ್ಷಿಸುವ ಸುವಾರ್ತೆಯ ಶಕ್ತಿಯ ಬಗ್ಗೆ (ರೋಮಾ 1:16), ಮಾನವರನ್ನು ಹೊಸಬರನ್ನಾಗಿ ಮಾಡುವ ಯೇಸು ಕ್ರಿಸ್ತನ ಆತ್ಮನ ಶಕ್ತಿಯ ಬಗ್ಗೆಯೂ (ಯೋಹಾನ 3:5-8) ಅವರಿಗೆ ಏನೂ ಗೊತ್ತಿರುವದಿಲ್ಲ. ಈ ಶಕ್ತಿಯ ಬಗ್ಗೆ ಅವರ ಸ್ವಂತ ಜೀವನದಲ್ಲಿ ಅವರಿಗೆ ಏನೂ ಗೊತ್ತಿಲ್ಲವಾದ್ದರಿಂದ ಅವರು ಅದರನ್ನು ಸಂಪೂರ್ಣವಾಗಿ ನಿರಾಕರಿಸುತ್ತಾರೆ.

*"ಇಂಥವರ ಸಹವಾಸವನ್ನು ಮಾಡದಿರು"*– 2:21; ಮತ್ತಾಯ 18:17; 1 ಕೊರಿಂಥ 5:11,13; 2 ಕೊರಿಂಥ 6:17; 2 ಥೆಸ 3:6; ತೀತ 3:10 ರೊಂದಿಗೆ ಹೋಲಿಸಿ ನೋಡಿರಿ. ಪೌಲನು ತಿಮೊಥೆಯನಿಗೆ ಇಂಥವರ ಸಹವಾಸ ಮಾಡಬೇಡ ಎಂದು ಹೇಳುತ್ತಾ ಇದ್ದಾನೆ ಅಂದರೆ ಇಂಥವರು ಆಗಲೂ ಇದ್ದರು. ಇಂಥವರು ಪ್ರತಿಯೊಂದು ಸಂತತಿಯಲ್ಲಿಯೂ ಇರುತ್ತಾರೆ. ಆದರೆ ಯುಗದ ಸಮಾಪ್ತಿಯು ಹತ್ತಿರವಾಗುವ ಸಮಯದಲ್ಲಿ ಇಂಥವರು ಹೆಚ್ಚಾಗುವರು (ಮತ್ತಾಯ 24:10-14; 2 ಥೆಸ 2:1-12). **6**

**3:6** ಕಪಟಿಗಳಾಗಿರುವ ಇವರಲ್ಲಿ ಕೆಲವರು ಕೆಲವರನ್ನು ವಂಚಿಸಲು ಮತ್ತು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಾರೆ ಮತ್ತು ಅವರ ಕಣ್ಣುಗಳು ಸಭೆಯಲ್ಲಿರುವ ಸ್ತ್ರೀಯರ ಮೇಲೆ ಬೀಳುತ್ತವೆ. ಪುರುಷರಿಗಿಂತ ಸ್ತ್ರೀಯರು ಸುಲಭವಾಗಿ ತಮ್ಮ ಬಲೆಗೆ ಬೀಳುತ್ತಾರೆ ಎಂಬದು ಅವರ ಅಭಿಪ್ರಾಯವಾಗಿರುತ್ತದೆ ಎಂಬದು ಇದರಿಂದ ಗೊತ್ತಾಗುತ್ತದೆ. **7**

**3:7** ಇದು ಅನೇಕರ ದುಃಖ ಸ್ಥಿತಿಯಾಗಿದೆ. ಅವರು ಸತ್ಯವನ್ನು ಮತ್ತೆಮತ್ತೆ ಕೇಳಿಸಿಕೊಳ್ಳುತ್ತಾರೆ, ಮತ್ತು ತಮಗೆ ಸತ್ಯ ಬೇಕೆಂದು ಅಂದುಕೊಳ್ಳುತ್ತಾರೆ. ಆದರೆ

ನಿಜವಾಗಿಯೂ ಅವರಿಗೆ ಅದು ಬೇಡ, ಆದ್ದರಿಂದ ಅವರು ಕೇಳಿಸಿಕೊಳ್ಳುವದನ್ನು ಅರ್ಥಮಾಡಿಕೊಳ್ಳುವದಿಲ್ಲ. ಈ ಕಾರಣದಿಂದಲೇ ಸತ್ಯವನ್ನು ವಿರೋಧಿಸುವವರು ಅವರನ್ನು ಮಾರ್ಗ ತಪ್ಪಿಸಲು ಯಶಸ್ವಿಯಾಗುತ್ತಾರೆ(2 ಥೆಸ 2:10). **8**

**3:8** ಯನ್ನ ಮತ್ತು ಯಂಬ್ರ ಎಂಬ ಹೆಸರುಗಳು ಇಡೀ ಸತ್ಯವೇದದಲ್ಲಿ ಇಲ್ಲಿ ಮಾತ್ರವೇ ಬರೆಯಲ್ಪಟ್ಟಿವೆ, ಆದರೆ ಮೋಶೆಗೆ ವಿರೋಧ ವ್ಯಕ್ತಪಡಿಸಿದ್ದನ್ನು ವಿಮೋ 7:10-12,22 ರಲ್ಲಿ ಬರೆಯಲಾಗಿದೆ.

"*ಬುದ್ಧಿಗೆಟ್ಟವರು*"– 1 ತಿಮೊ 6:5. **9**

**3:9** ಅವರು ಸತ್ಯ ಮತ್ತು ಅಧಿಕಾರದ ವಿಷಯದಲ್ಲಿ ಅವರಿಗಿರುವ ಕೊರತೆಯನ್ನು ಸದಾಕಾಲಕ್ಕೂ ನೀಗಿಸಿಕೊಳ್ಳಲು ಆಗುವದಿಲ್ಲ. ಯನ್ನ ಮತ್ತು ಯಂಬ್ರರು ಬೈಲಿಗೆ ಬಂದರು (ವಿಮೋ 8:18) ಅವರಂತೆಯೇ ಈ ಕಪಟಿಗಳೂ ಬೈಲಿಗೆ ಬರುವರು. **10**

**3:10** ಪೌಲನು ತನಗೆ ಘನಮಾನಗಳು ಸಲ್ಲಬೇಕೆಂದು ಬಯಸುತ್ತಾ ಇರಲಿಲ್ಲ. ಅವನು ಈ ರೀತಿಯಾಗಿ ಮಾತನಾಡಿರುವದಕ್ಕೆ ಕಾರಣವೇನೆಂದರೆ ವಿಶ್ವಾಸಿಗಳು ಮತ್ತು ಕ್ರೈಸ್ತ ಸೇವಕರು ಹೇಗೆ ಜೀವಿಸಬೇಕೆಂಬದನ್ನು ತಿಳಿಸಲು ದೇವರು ಅವನನ್ನು ಮಾದರಿಯಾಗಿ ಇರಿಸಿದ್ದಾನೆ ಎಂಬದನ್ನು ಅವನು ಬಲ್ಲವನಾಗಿದ್ದನು ಮತ್ತು ತಿಮೊಥೆಯನು ಅವನನ್ನು ಹಿಂಬಾಲಿಸಬೇಕೆಂದು ಬಯಸಿದನು (ವ 14; 1 ಕೊರಿಂಥ 11:1; ಫಿಲಿಪ್ಪಿ 3:17; 2 ಥೆಸ 3:7; ಅಪೊ 20:18-35). **11**

- **3:11** ಅಪೊ 13:49—14:20; 2 ಕೊರಿಂಥ 11:23-27. **12**

- **3:12** ಯೋಹಾನ 15:18-21; 16:33; ಅಪೊ 14:22; 1 ಪೇತ್ರ 4:1,12; ರೋಮಾ 8:17.

"*ಕ್ರಿಸ್ತನಲ್ಲಿ*"– 1:9. ಹಿಂಸೆಗಳು ಬೇರೆಬೇರೆ ಸ್ಥಳಗಳಲ್ಲಿ, ಬೇರೆ ಬೇರೆ ಸಮಯಗಳಲ್ಲಿ, ಬೇರೆಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆ ರೀತಿಯಾಗಿರುತ್ತದೆ. ಕೆಲವೊಮ್ಮೆ ಅದರ ನಿಮಿತ್ತ ಶಾರೀರಿಕ ಶ್ರಮೆಗಳು ಎದುರಾಗುತ್ತವೆ, ಕೆಲವೊಮ್ಮೆ ಅವಕೃಪೆಗೆ ಒಳಗಾಗಬೇಕಾಗುತ್ತದೆ ಮತ್ತು ಬೇಧಗಳನ್ನು ಎದುರಿಸಬೇಕಾಗುತ್ತದೆ. ಆದರೆ ದೇವರಲ್ಲಿ ಭಯಭಕ್ತಿಯುಳ್ಳ ವಿಶ್ವಾಸಿಗಳೆಲ್ಲರೂ ಅದನ್ನು ತಮ್ಮ ಜೀವಿತದ ಯಾವದಾದರೊಂದು ಘಳಿಗೆಯಲ್ಲಿ ಆಯಾ ಅಳತೆಯ ಮೇರೆಗೆ ಅನುಭವಿಸುತ್ತಾರೆ. **13**

**3:13** ಅವರು ಜೀವನದಲ್ಲಿ ಕೆಟ್ಟ ಗುರಿಯನ್ನು ಹೊಂದಿದ್ದಾರೆ ಮತ್ತು ಅದರ ಕಡೆಗೆ ತಕ್ಕ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾರೆ. ದುಷ್ಟತನದ ಫಲಿತಾಂಶಗಳು ಹೆಚ್ಚು ದುಷ್ಟತನ, ಇತರರನ್ನು ವಂಚಿಸುವದರ ಫಲಿತಾಂಶ ಅವರೇ ಸತ್ಯವನ್ನು ಗುರುತಿಸಲು ಪರದಾಡಬೇಕಾಗುತ್ತದೆ. **14**

**3:14** ವಚನ 10; 1:13-14; 1 ತಿಮೊ 1:3. **15**

**3:15** *"ಚಿಕ್ಕಂದಿನಿಂದಲೂ"*– 1:5. ಇದರ ಅರ್ಥ ಬಹುತೇಕ ಇದಾಗಿರಬಹುದು: ಅವರು ಕ್ರೈಸ್ತರಾಗುವದಕ್ಕಿಂತ ಮೊದಲೇ ತಿಮೊಥೆಯನ ತಾಯಿ ಮತ್ತು ಅಜ್ಜಿ ಅವನಿಗೆ ಹಳೆಯ ಒಡಂಬಡಿಕೆಯನ್ನು ("ಪವಿತ್ರ ವಚನಗಳನ್ನು") ಕಲಿಸಿದ್ದರು. ಧರ್ಮೋ 6:6-7 ರಲ್ಲಿ ದೇವರು ಕೊಟ್ಟಿರುವ ಆಜ್ಞೆಗಳನ್ನು ಅವರು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದರು. ಕ್ರೈಸ್ತ ತಂದೆತಾಯಿಗಳು ಇಂದು ಇಂಥ ಕಾರ್ಯದಿಂದ ಹಿಂದೆ ಸರಿಯಬೇಕೇ? – ಎಫೆ 6:4. ಈಗ "ಪವಿತ್ರ ವಚನಗಳು" ಹಳೆಯ ಮತ್ತು ಹೊಸ ಒಡಂಬಡಿಕೆಯ ಹೆಸರಿನಲ್ಲಿ ಒಂದೇ ಪುಸ್ತಕದಲ್ಲಿ ನಮಗೆ ಕೊಡಲ್ಪಟ್ಟಿವೆ. ಹಳೆಯ ಒಡಂಬಡಿಕೆಯನ್ನು ಅರ್ಥಮಾಡಿಕೊಳ್ಳುವಾಗ ಅದು ಜನರಿಗೆ "ರಕ್ಷಣೆ ಹೊಂದುವ ಜ್ಞಾನ" –ಕೊಡುತ್ತದೆ ಎಂಬದನ್ನು ಗಮನಿಸಿರಿ. ಲೂಕ 24:25-27,45-47; ಯೋಹಾನ 5:39,46 ರೊಂದಿಗೆ ಹೋಲಿಸಿ ನೋಡಿರಿ.

*"ಕ್ರಿಸ್ತಯೇಸುವಿನಲ್ಲಿರುವ ನಂಬಿಕೆ"*– ಹಳೆಯ ಒಡಂಬಡಿಕೆ ಅದರಲ್ಲಿಯೇ ಮುಕ್ತಾಯವಾಗುವದಿಲ್ಲ, ಅದು ದೇವರ ಸಂಪೂರ್ಣವಾದ ಪ್ರಕಟನೆಯಲ್ಲ. ಅದು ಯೇಸು ಕ್ರಿಸ್ತನ ಕಡೆಗೆ ನಡೆಸುತ್ತದೆ ಮತ್ತು ಮಾನವರೆಲ್ಲರಿಗೂ "ಆತನಲ್ಲಿ ನಂಬಿಕೆಯನ್ನಿಡುವಂತೆ" ಪ್ರಚುರಪಡಿಸುತ್ತದೆ. **16**

**3:16** *"ಪ್ರತಿಯೊಂದು ಶಾಸ್ತ್ರವು"*–ಎಂದು ಹೇಳಿರುವ ಪೌಲನ ಮಾತುಗಳ ಅರ್ಥ ಲೋಕ ಧರ್ಮಗಳು ಕರೆಯುವ ಪವಿತ್ರ ಪುಸ್ತಕಗಳು ಅಥವಾ ಅವೆಲ್ಲವುಗಳು ದೇವರಾತ್ಮ ಪ್ರೇರಣೆಯ ಬರಹಗಳು ಎಂಬದಲ್ಲ. ಖಂಡಿತವಾಗಿಯೂ ಅವುಗಳಲ್ಲಿ ಇದರಲ್ಲಿ ಸೇರುವದಿಲ್ಲ. ಅವನು ಪವಿತ್ರ ಸತ್ಯವೇದದ ಬಗ್ಗೆ ಮಾತ್ರವೇ ಮಾತನಾಡುತ್ತಾ ಇದ್ದಾನೆ. ಹಾಗೆಯೇ 2 ಪೇತ್ರ 1:20-21; ಮತ್ತಾಯ 4:4; 5:17-18; 15:3-4; 22:43; ಮಾರ್ಕ 12:36; ಲೂಕ 24:44; ಯೋಹಾನ 10:35; ಅಪೊ 4:35; 1 ಕೊರಿಂಥ 2:13; ಇಬ್ರಿ 1:5-13; 1 ಪೇತ್ರ 1:11; ಪ್ರಕ 1:1; 2:1; 22:18-19 ನೋಡಿರಿ. ಯೆರೆ 1:2,9 ರೊಂದಿಗೆ ಹೋಲಿಸಿ ನೋಡಿರಿ. ನ್ಯಾಯಸ್ಥಾಪಕರ ಪರಿಚಯವನ್ನು ನೋಡಿರಿ.

*"ಪ್ರತಿಯೊಂದು"*– ಸತ್ಯವೇದದ ಕೆಲವು ಪದಗಳು ಮಾತ್ರವಲ್ಲ ಬೇರೆ ಕೆಲವುಗಳಿಗಿಂತ ಹೆಚ್ಚಿನವುಗಳು, ಸತ್ಯವೇದದ ಒಂದು ಪುಸ್ತಕ ಮಾತ್ರವಲ್ಲ ಬೇರೆ ಕೆಲವುಗಳಿಗಿಂತ ಹೆಚ್ಚಿನವುಗಳು.

*"ದೈವಪ್ರೇರಿತ"*– ಈ ಪದದ ನಿಜವಾದ ಅರ್ಥ ದೇವರೇ ಹೇಳಿರುವ ಮಾತುಗಳು. ದೇವರು ತನ್ನ ಸತ್ಯ, ತನ್ನ ಆಲೋಚನೆಗಳು, ತನ್ನ ಮಾತುಗಳನ್ನು ತನ್ನ ಸೇವಕರು, ಪ್ರವಾದಿಗಳ ಮನಸ್ಸುಗಳಿಗೆ ಹೇಳಿದನು ಮತ್ತು ತನ್ನ ಆತ್ಮವನ್ನು ಅವರ ಹೃದಯದೊಳಗೆ ಕಳುಹಿಸಿದನು ಹಾಗೂ ಅವರೇನು ಬರೆಯಬೇಕೆಂದು ಆತನು ಉದ್ದೇಶಿಸಿದನೋ ಅದನ್ನೇ ಅವರು ಬರೆಯುವಂತೆ ಪ್ರೇರಣೆಯನ್ನು ನೀಡಿದನು. ಆದ್ದರಿಂದ ದೇವರ ವಾಕ್ಯಗಳನ್ನು "ದೇವರು ಹೇಳಿದ ಮಾತುಗಳು" ಎಂದು ಕರೆಯಬಹುದು. ಬೇರೊಂದು ಸ್ಥಳದಲ್ಲಿ "ದೇವರ ಬಾಯಿಂದ

ಹೊರಡುವ ಪ್ರತಿಯೊಂದು ಮಾತಿನಿಂದಲೂ” ಮಾನವನು ಬದುಕುವನು ಎಂದು ಹೇಳಲಾಗಿದೆ (ಮತ್ತಾಯ 4:4). ದೇವರು ಈ ರೀತಿಯಾಗಿ ಯಾಕೆ ನಡೆದುಕೊಂಡನು ಎಂಬದನ್ನು ಗಮನಿಸಿರಿ. ಮಾನವರು ಸತ್ಯವೇದವನ್ನು ಆರಾಧಿಸಬೇಕು ಅಥವಾ ಅದನ್ನು ಸಾಮಾನ್ಯವಾದ ಪವಿತ್ರ ಪುಸ್ತಕವೆಂದು ಪರಿಗಣಿಸಬೇಕು ಹಾಗೂ ಭಯಭಕ್ತಿಯಿಂದ ಹಿಡಿದುಕೊಳ್ಳಬೇಕು ಎಂಬದಕ್ಕಾಗಿಯಲ್ಲ. ಮಾನವರು ಸತ್ಯವೇದವನ್ನು ಉಪಯೋಗಿಸಬೇಕು ಎಂಬ ಕಾರಣಕ್ಕಾಗಿಯೇ ಆತನು ಅದನ್ನು ಅವರಿಗೆ ಕೊಟ್ಟಿದ್ದಾನೆ. ಸತ್ಯವೇದವು ನಾಲ್ಕು ರೀತಿಯಲ್ಲಿ ಉಪಯುಕ್ತವಾಗಿದೆ ಎಂದು ಪೌಲನು ಹೇಳಿದ್ದಾನೆ – ಸತ್ಯವನ್ನು ಕಲಿಸುವದು (ದೇವರು, ಯೇಸು ಕ್ರಿಸ್ತನು, ಮಾನವನು, ರಕ್ಷಣೆ ಇತ್ಯಾದಿ ವಿಷಯಗಳು), ಪಾಪ ಮತ್ತು ಸುಳ್ಳು ಬೋಧನೆಯನ್ನು ಗದರಿಸುವದು, ತಪ್ಪು ಮಾಡುವವರು ಮತ್ತು ದಾರಿ ತಪ್ಪುವವರನ್ನು ತಿದ್ದುವದು ಮತ್ತು ಅನೀತಿಯಿಂದ ತುಂಬಿರುವ ಲೋಕದಲ್ಲಿ ನೀತಿವಂತರಾಗಿ ಜೀವಿಸುವದು ಹೇಗೆ ಎಂದು ದೇವಜನರಿಗೆ ತರಬೇತಿಯನ್ನು ಕೊಡುವದು. **17**

**3:17** ಸತ್ಯವೇದದ ಕುರಿತಾದ ಸಂಪೂರ್ಣ ಮಾಹಿತಿಯಿಲ್ಲದೆ ಯೇಸು ಕ್ರಿಸ್ತನ ಯಾವ ಸೇವಕನೂ ಒಳ್ಳೆಯ ಕಾರ್ಯಗಳನ್ನು ಮಾಡಲು ಸಂಪೂರ್ಣವಾಗಿ ಸಜ್ಜುಗೊಳ್ಳಲು ಆಗುವದಿಲ್ಲ. ನಾವು ಇತರೆ ವಿಷಯಗಳನ್ನು ಕಲಿತುಕೊಳ್ಳಬಹುದು ಆದರೆ ಇದು ನಮ್ಮ ಜೀವಿತಗಳ ಪ್ರಮುಖ ಅಧ್ಯಯನವಾಗಿರಲಿ.

*“ಸಕಲ ಸತ್ಕಾರ್ಯ”*– 2:21; ಎಫೆ 4:11-13; ಇಬ್ರಿ 13:20-21.

# 4 1

**4:1** ಪೌಲನು ಅತ್ಯಂತ ಗಂಭೀರವಾಗಿ ಮಾತನಾಡುತ್ತಾ ಇದ್ದಾನೆ. ಆತನು ಅತ್ಯಂತ ಪ್ರಾಮುಖ್ಯವಾದ ವಿಷಯವನ್ನು ಹೇಳಬೇಕೆಂದಿದ್ದಾನೆ.

*“ನ್ಯಾಯಾಧಿಪತಿ”*– ಯೋಹಾನ 5:27; ಅಪೊ 17:31; ರೋಮಾ 2:16; 1 ಕೊರಿಂಥ 4:5; 2 ಕೊರಿಂಥ 5:10.

*“ಪ್ರತ್ಯಕ್ಷನಾಗುವನು”*– ವ 8; 1 ತಿಮೊ 6:14; ತೀತ 2:13; ಇಬ್ರಿ 9:28.

*“ರಾಜ್ಯ”*– ಮತ್ತಾಯ 4:17; 13:11; 19:28; 25:34; ಲೂಕ 19:11-12; ಅಪೊ 1:3,6. **2**

**4:2** *“ದೇವರ ವಾಕ್ಯವನ್ನು ಸಾರು”*– ಸಭಾಪಾಲಕರು, ಬೋಧಕರು ಮತ್ತು ಸುವಾರ್ತಿಕರ ದೊಡ್ಡ ಕಾರ್ಯವನ್ನು ಇಲ್ಲಿ ನಾವು ನೋಡಬಹುದು (ಭೂಲೋಕದಲ್ಲಿ ಇದಕ್ಕಿಂತ ದೊಡ್ಡ ಕಾರ್ಯ ಬೇರೆ ಯಾವುದೂ ಇಲ್ಲ). ಅವರು ತಮ್ಮ ಅಭಿಪ್ರಾಯಗಳು ಅಥವಾ ಇತರರ ಅಭಿಪ್ರಾಯಗಳನ್ನು ಬೋಧಿಸಬಾರದು. ದೇವರ ವಾಕ್ಯವೇ ಅವರ ಸಂದೇಶವಾಗಿರಬೇಕು ಮತ್ತು ಬೇರೆ ಯಾವುದೂ ಇರಬಾರದು. ಮತ್ತಾಯ 28:20; ಮಾರ್ಕ 16:15; 1 ಕೊರಿಂಥ

1:23; 2:1-5; 2 ಕೊರಿಂಥ 4:5; 1 ಪೇತ್ರ 4:11 ರೊಂದಿಗೆ ಹೋಲಿಸಿ ನೋಡಿರಿ.

*"ಅನುಕೂಲವಿರುವ ಕಾಲದಲ್ಲಿಯೂ, ಅನುಕೂಲ ಇಲ್ಲದಿರುವ ಕಾಲದಲ್ಲಿಯೂ"*– ಇದು ಸಭೆಯಲ್ಲಿ ಇರಲಿ ಅಥವಾ ಇಲ್ಲದಿರಲಿ, ಅನುಕೂಲವಿರಲಿ ಅಥವಾ ಇಲ್ಲದಿರಲಿ ಯಾವಾಗಲೂ ಸಿದ್ಧರಾಗಿರುವದರ ಬಗ್ಗೆ ಮಾತನಾಡುತ್ತದೆ.

*"ಗದರಿಸು, ಎಚ್ಚರಿಸು"*– 3:16; 1 ಥೆಸ 3:2; 4:18; 1 ತಿಮೊ 5:20; ತೀತ 1:9,13; 2:15; ಇಬ್ರಿ 3:13; 10:25.

*"ದೀರ್ಘಶಾಂತಿ ಮತ್ತು ಉಪದೇಶ"*– 2:24-25. **3**

**- 4:3** 3:1; 1 ತಿಮೊ 4:1 ನೋಡಿರಿ.

*"ಸ್ವಸ್ಥ ಬೋಧನೆ"*– 1:13; 1 ತಿಮೊ 1:10-11; 6:3; ತೀತ 1:9; 2:1.

*"ತಮ್ಮ ದುರಾಶೆಗಳಿಗೆ ಅನುಕೂಲವಾದ"*– ಅಂಥ ಜನರು ತಮಗೆ ಮೆಚ್ಚಿಕೆಯಾದ ಕಾರ್ಯಗಳನ್ನು ಮಾಡಲು ಮತ್ತು ತಮಗೆ ಮೆಚ್ಚಿಕೆಯಾದ ವಿಷಯಗಳನ್ನು ಕೇಳಲು ಬಯಸುತ್ತಾರೆ. "ಯಾವುದು ಸತ್ಯ?" ಎಂಬದು ಅವರ ಪ್ರಶ್ನೆಯಾಗಿರುವದಿಲ್ಲ ಬದಲಾಗಿ "ಯಾವುದರಿಂದ ನನಗೆ ಅನುಕೂಲವಾಗುತ್ತದೆ" ಎಂಬದೇ ಅವರ ಪ್ರಶ್ನೆಯಾಗಿರುತ್ತದೆ? (ಆದರೆ ಅವರು ತಮ್ಮ ಭಾವನೆಗಳನ್ನು ಇದೇ ರೀತಿ ವ್ಯಕ್ತಪಡಿಸುವದಿಲ್ಲ). ಅವರಿಗೆ ಸತ್ಯವು ಬೇಡ ಯಾಕಂದರೆ ಸತ್ಯವು ಅವರ ಜೀವನ ಶೈಲಿಯನ್ನು ವಿರೋಧಿಸುತ್ತದೆ ಮತ್ತು ಅವರು ಮಾಡುವ ಕಾರ್ಯಗಳನ್ನು ಅಡ್ಡಿಪಡಿಸುತ್ತದೆ. ಆದ್ದರಿಂದ ಅವರು ಸತ್ಯದ ಬೆಳಕಿನಿಂದ ಹೊರ ಬಂದು ಕತ್ತಲೆಯೊಳಗೆ ಸಿಕ್ಕಿಕೊಳ್ಳುತ್ತಾರೆ. ಇದುವೇ ಅವರ ದೊಡ್ಡ ಪಾಪ ಮತ್ತು ನ್ಯಾಯತೀರ್ಪಾಗಿದೆ – ಯೋಹಾನ 3:18-20. ದೇವರ ರಕ್ಷಣೆ ಹೊಂದಬೇಕಾದರೆ ನಾವು ಎಲ್ಲದಕ್ಕಿಂತ ಹೆಚ್ಚಾಗಿ ಸತ್ಯವನ್ನು ಬಯಸುವವರಾಗಿರಬೇಕು. ಆದರೆ ಇವರು ಅದನ್ನು ಬಯಸುವದಿಲ್ಲ ಮತ್ತು ಅದನ್ನು ಬಯಸುವ ಬಯಕೆಯೂ ಇವರಿಗಿಲ್ಲ. 2 ಥೆಸ 2:10-12 ನೋಡಿರಿ. **4**

**4:4** *"ಕಲ್ಪನಾ ಕಥೆಗಳು"*– 1 ತಿಮೊ 1:4; 4:7; ತೀತ 2:14. ಅವರು ದೇವರ ಸತ್ಯಕ್ಕೆ ಬದಲಾಗಿ ಕಲ್ಪನಾ ಕಥೆಗಳಿಗೆ ಆದ್ಯತೆಯನ್ನು ಕೊಡುತ್ತಾರೆ. **5**

**4:5** *"ಶ್ರಮೆಗಳು"*– 2:3.

*"ಸೌವಾರ್ತಿಕನು"*– ತಿಮೊಥೆಯನು ಸಭಾಪಾಲಕನು ಮತ್ತು ಬೋಧಕನಾಗಿದ್ದರೂ ಯೇಸು ಕ್ರಿಸ್ತನ ಸುವಾರ್ತೆಯನ್ನು ಸಾರುವ ಮೂಲಕ ಜನರನ್ನು ಕ್ರಿಸ್ತನ ಕಡೆಗೆ ನಡೆಸುವವನಾಗಬೇಕಾಗಿತ್ತು. **6**

**4:6** *"ಪಾನದ್ರವ್ಯ"*– ಫಿಲಿಪ್ಪಿ 2:17.

*"ನಾನು ಹೊರಟು ಹೋಗಬೇಕಾದ ಸಮಯ"*– ಖಂಡಿತವಾಗಿಯೂ ಕರ್ತನೇ ಇದನ್ನು ಪೌಲನಿಗೆ ಪ್ರಕಟಪಡಿಸಿದ್ದನು. **7**

**4:7** *"ಹೋರಾಟ"*– 1 ಕೊರಿಂಥ 9:26; 2 ಕೊರಿಂಥ 10:4; 1 ತಿಮೊ 1:8; 6:12; ಎಫೆ

6:10-18.

*"ಓಟ"*– 1 ಕೊರಿಂಥ 9:24; ಗಲಾ 2:2; 5:7; ಫಿಲಿಪ್ಪಿ 3:13-14; ಇಬ್ರಿ 12:1. ಅಪೊ 20:24 ರಲ್ಲಿ ಅವನು ವ್ಯಕ್ತಪಡಿಸಿರುವ ತನ್ನ ಗುರಿಯನ್ನು ಸಾಧಿಸಿದನು.

*"ನಂಬಿಕೆ"*– ನಂಬಿಕೆಗೆ ಅಡಿಪಾಯವಾಗಿ ದೇವರು ಕೊಟ್ಟಿರುವ ಸತ್ಯ. ಇದನ್ನು ಅವನಿಗೆ ಒಪ್ಪಿಸಲಾಯಿತು (1 ಕೊರಿಂಥ 4:1; ಎಫೆ 3:2-9). ಅವನು ಅದನ್ನು ಕಾಪಾಡಿಕೊಂಡನು – ಅದನ್ನು ತನ್ನ ಸ್ವಂತ ನಂಬಿಕೆಯ ವಿಷಯವಾಗಿ ಕಾಪಾಡಿಕೊಂಡನು ಮತ್ತು ಜೀವನದ ನಿಯಮವಾಗಿ ಪಾಲಿಸುತ್ತಾ ಇದ್ದನು ಹಾಗೂ ಇತರರಿಗೆ ಕೊಡುವ ಸಲುವಾಗಿ ಮನೆವಾರ್ತೆಯವನಂತೆ ಅದನ್ನು ಜೋಪಾನ ಮಾಡಿದನು. ಅವನು ಇದನ್ನು ನಂಬಿಗಸ್ತಿಕೆಯಿಂದ ಮಾಡಿದ್ದರಿಂದ ತನ್ನ "ನಿರ್ಗಮನದ" ಸಮಯದನ್ನು ಸಂತೋಷವಾಗಿ ನೋಡುತ್ತಾ ಇದ್ದನು. **8**

**4:8** *"ಜಯಮಾಲೆ"*– ಇಲ್ಲಿ (ಮತ್ತು 1 ಕೊರಿಂಥ 9:25; ಫಿಲಿಪ್ಪಿ 4:1; 1 ಥೆಸ 2:19; ಯಾಕೋಬ 1:12; 1 ಪೇತ್ರ 5:4; ಪ್ರಕ 20:10; 3:11 ರಲ್ಲಿ) ಉಪಯೋಗಿಸಲಾಗಿರುವ ಗ್ರೀಕ್ ಪದವು ಅರಸನು ಧರಿಸುವಂಥ ಕಿರೀಟವನ್ನು ಸೂಚಿಸುವದಿಲ್ಲ. ಇದರ ಅರ್ಥ ಆಗಿನ ದಿನಗಳಲ್ಲಿ ಕ್ರೀಡಾ ಸ್ಪರ್ಧೆಗಳಲ್ಲಿ ಜಯಸುತ್ತಿದ್ದವರಿಗೆ ಎಲೆಗಳಿಂದ ಮಾಡಿ ಕೊಡಲಾಗುತ್ತಾ ಇದ್ದ ಜಯಮಾಲೆಯನ್ನು ಸೂಚಿಸುತ್ತದೆ. ಪೌಲನು, ತನ್ನ ಓಟವನ್ನು ಮುಗಿಸಿ, ತನಗೆ ದೊರೆಯುವ "ಜಯಮಾಲೆಯನ್ನು" –ಎದುರುನೋಡುತ್ತಾ ಇದ್ದನು. 1 ಕೊರಿಂಥ 9:25 ರೊಂದಿಗೆ ಹೋಲಿಸಿ ನೋಡಿರಿ. ನೀತಿಯ ಜಯಮಾಲೆ ಎಂದರೆ ಅವನು ಜೀವಿಸಿದ ನೀತಿಯ ಜೀವನಕ್ಕೆ ದೊರೆಯುವಂಥ ಬಹುಮಾನವಾಗಿದೆ, ಅನೀತಿಗೆ ವಿರುದ್ಧವಾಗಿ ಮಾಡಿದ ಹೋರಾಟಕ್ಕೆ, ನೀತಿಯ ಓಟವನ್ನು ಓಡಿದ್ದಕ್ಕೆ ಮತ್ತು ನೀತಿಯ ನಂಬಿಕೆಯನ್ನು ಕಾಪಾಡಿಕೊಂಡದ್ದಕ್ಕೆ ದೊರೆಯುವ ಬಹುಮಾನವಾಗಿದೆ. ಜಯಮಾಲೆಯ ವಿಷಯದಲ್ಲಿ ಮೇಲೆ ಕೊಡಲಾಗಿರುವ ವಚನಭಾಗಗಳನ್ನು ನೋಡಿರಿ.

*"ಆ ದಿನದಲ್ಲಿ"*– 1:12,18; 2 ಥೆಸ 1:10.

*"ಆತನ ಪ್ರತ್ಯಕ್ಷತೆಯನ್ನು ಪ್ರೀತಿಸುವವರು"*– ನೀತಿಯ ಜಯಮಾಲೆ ಮತ್ತು ಯೇಸು ಕ್ರಿಸ್ತನ ಪ್ರತ್ಯಕ್ಷತೆಯನ್ನು ಪ್ರೀತಿಸುವದು ಇವೆರೆಡರ ನಡುವೆ ಇರುವ ಸಂಬಂಧವೇನು? ನೀತಿವಂತರಾಗಿ ಜೀವಿಸುವವರು ಮಾತ್ರವೇ ಯೇಸು ಕ್ರಿಸ್ತನ ಬರೋಣವನ್ನು ಎದುರುನೋಡುವವರಾಗಿರುತ್ತಾರೆ. ಆತನ ಬರೋಣವನ್ನು ಯಾರು ಬಯಸುತ್ತಾರೋ ಅವರು ತಮ್ಮನ್ನು ಶುದ್ಧರನ್ನಾಗಿ ಮಾಡಿಕೊಳ್ಳುತ್ತಾರೆ. 1 ಯೋಹಾನ 3:2-3 ನೋಡಿರಿ. ಆತನ ಬರೋಣದ ಬಗ್ಗೆ ತಿಳಿದುಕೊಳ್ಳುವದು ಮತ್ತು ಅದರ ಬಗ್ಗೆ ಮಾತನಾಡುವದು ಹಾಗೂ ಬೋಧಿಸುವದು ಮಾತ್ರ ಸಾಲದು. ನೀತಿಯ ಜಯಮಾಲೆಯನ್ನು ಹೊಂದಬೇಕಾದರೆ ನಾವು ಅಸಕ್ತಿಯಿಂದ ಅದನ್ನು ಬಯಸುವವರಾಗಿರಬೇಕು. **10**

**4:10** *"ಇಹಲೋಕವನ್ನು ಪ್ರೀತಿಸಿ"*– ಇದು ಯಾರ ವಿಷಯದಲ್ಲಾದರೂ ಬಹಳ ದುಃಖದ ಸಂಗತಿಯಾಗಿದೆ. 1 ಯೋಹಾನ 2:15-17 ನೋಡಿರಿ. **11**

**4:11** *"ಲೂಕ"*– ಕೊಲೊ 4:14; ಫಿಲೆ 24.

*"ಮಾರ್ಕ"*– ಅಪೊ 12:25; 13:5,13; 15:37,39; 1 ಪೇತ್ರ 5:13. ಮಾರ್ಕನು ತನ್ನ ವಿಫಲತೆಯ ನಂತರ ತಾನು ನಂಬಿಗಸ್ತನಾದ ದೇವರ ಸೇವಕನು ಎಂಬದನ್ನು ಸಾಬೀತುಪಡಿಸಿದನು. ನಾವು ಸೋತುಹೋಗುವಾಗ ದೇವರು ನಮ್ಮನ್ನು ತಳ್ಳಿಬಿಡದೆ, ನಮ್ಮನ್ನು ಸಹಿಸಿಕೊಳ್ಳುವದು ಮತ್ತು ನಮ್ಮನ್ನು ಉತ್ತಮರನ್ನಾಗಿ ಮಾಡಲು ನಮ್ಮೊಂದಿಗೆ ಕಾರ್ಯಮಾಡುವದು ಒಳ್ಳೆಯ ಸಂಗತಿಯಾಗಿದೆ. **13**

**4:13** *"ಚರ್ಮದ ಕಾಗದಗಳು"*– ಈಜಿಪ್ಟ್ ನಲ್ಲಿ ಕಂಡು ಬರುವ ಸಸ್ಯದ ಸುರುಳಿಗಳು (ಗಿಡದಿಂದ ತಯಾರಿಸಲಾದ ಬರವಣಿಗೆಯ ಸಾಮಗ್ರಿಗಳು), ಚರ್ಮದ ಕಾಗದಗಳನ್ನು ಪ್ರಾಣಿಗಳ ಚರ್ಮದಿಂದ ಮಾಡಲಾಗುತ್ತದೆ. ಅವುಗಳ ಮೇಲೆ ಏನನ್ನು ಬರೆಯಲಾಗಿತ್ತು ಎಂಬದನ್ನು ಪೌಲನು ಹೇಳಿಲ್ಲ. **14-15**

**4:14-15** 1:15; 2:17; 1 ತಿಮೊ 1:20 ನೋಡಿರಿ. ಪೌಲನು ತೊಂದರೆಪಡಿಸುವ ವ್ಯಕ್ತಿಗಳ ಹೆಸರುಗಳನ್ನು ಹೇಳಲು ಮತ್ತು ಅವರ ವಿಷಯವಾಗಿ ಜನರಿಗೆ ಎಚ್ಚರಿಕೆಗಳನ್ನು ಕೊಡಲು ಹಿಂಜರಿಯಲಿಲ್ಲ. **16**

**4:16** *"ಪ್ರತಿವಾದ"*– ಅವನು ಸೆರೆಮನೆಯಲ್ಲಿದ್ದನು ಮತ್ತು ನ್ಯಾಯಾಲಯದಲ್ಲಿ ವಿಚಾರಣೆಯನ್ನು ಎದುರಿಸಬೇಕಾಯಿತು. ಇಲ್ಲಿ ಅವನು ಪ್ರಾರಂಭದ ವಿಚಾರಣೆಯ ಬಗ್ಗೆ ಮಾತನಾಡುತ್ತಾ ಇದ್ದಾನೆ. ಅಪೊ 24 ನೇ ಅಧ್ಯಾಯದೊಂದಿಗೆ ಹೋಲಿಸಿ ನೋಡಿರಿ.

*"ನನ್ನನ್ನು ಕೈಬಿಟ್ಟರು"*– 1:15. ಆ ಸಮಯದಲ್ಲಿ ಲೂಕನು ಅವನೊಂದಿಗೆ ಇರಲಿಲ್ಲ. ಅವನು ಪೌಲನನ್ನು ತೊರೆದಿರುವ ಸಾಧ್ಯತೆ ಬಹಳ ಕಡಿಮೆಯಾಗಿದೆ. **17**

**4:17** ಕರ್ತನಾದ ಯೇಸು ಕ್ರಿಸ್ತನ ಸೇವಕರನ್ನು ಮಾನವರು ಕೈಬಿಡಬಹುದು ಆದರೆ ಕರ್ತನು ಎಂದಿಗೂ ಕೈ ಬಿಡುವದಿಲ್ಲ – ಇಬ್ರಿ 13:5-6.

*"ಬಲಪಡಿಸಿದನು"*– ಯೆಶಾಯ 40:29-31 . ಅಪೊ 18:9-10 ರೊಂದಿಗೆ ಹೋಲಿಸಿ ನೋಡಿರಿ.

*"ಕೇಳುವಂತೆ ಮಾಡಿದನು"*– ಬಹುಶಃ ಪೌಲನ ಮಾತುಗಳ ಅರ್ಥ ಅವನನ್ನು ವಿಚಾರಣೆ ಮಾಡಿದವರು ಮತ್ತು ಅಲ್ಲಿದ್ದ ಇತರರು ಅಂದರೆ ಅನ್ಯಜನಗಳು. ಅಂಥ ಸಮಯಗಳಲ್ಲಿಯೂ ಸುವಾರ್ತೆಯನ್ನು ಸಾರುವ ಧೈರ್ಯವನ್ನು ಕರ್ತನು ಪೌಲನಿಗೆ ಕೊಟ್ಟನು. ಮತ್ತಾಯ 10:17-20; ಮಾರ್ಕ 13:9; ಲೂಕ 21:12-15; ಅಪೊ 26:19-23 ರೊಂದಿಗೆ ಹೋಲಿಸಿ ನೋಡಿರಿ.

*"ಸಿಂಹದ ಬಾಯೊಳಗಿಂದ"*– ಅವನ ಮಾತಿನ ಅರ್ಥ ಯಾವುದೋ ಭಯಾನಕವಾದ

ಅಪಾಯ, ಆದರೆ ಅದು ಶಾರೀರಿಕವೋ ಅಥವಾ ಆತ್ಮೀಕವೋ ಎಂದು ಅವನು ಹೇಳಿಲ್ಲ. **18**

**4:18** *"ನನ್ನನ್ನು ಕಾಪಾಡಿದನು"*– ಅವನ ಮಾತಿನ ಅರ್ಥ ಕರ್ತನು ಅವನನ್ನು ಮರಣದಿಂದ ತಪ್ಪಿಸುವನು ಎಂಬದಲ್ಲ. ಅವನು ತನ್ನ ಮರಣದ ಸಮಯ ಹತ್ತಿರವಾಗಿದೆ ಎಂದು ಈಗಾಗಲೇ ಹೇಳಿದ್ದಾನೆ – ವ 6. ಆದರೆ ಕರ್ತನು ಅವನನ್ನು ದುಷ್ಟನಿಂದ ಕಾಪಾಡುವನು ಮತ್ತು ತನ್ನ ಮಾರ್ಗ ಹಾಗೂ ಸಮಯದಲ್ಲಿ ಅವನನ್ನು ಪರಲೋಕಕ್ಕೆ ಕರೆದುಕೊಂಡು ಹೋಗುವನು ಎಂಬ ದೃಢತೆ ಅವನಿಗಿತ್ತು. ಮತ್ತಾಯ 6:13 ರೊಂದಿಗೆ ಹೋಲಿಸಿ ನೋಡಿರಿ. **19**

**4:19** *"ಪ್ರಿಸ್ಕಳು" (ಪ್ರಿಸ್ಕಿಲ್ಲ) ಮತ್ತು "ಅಕ್ವಿಲ್ಲ"*– ಅಪೊ 18:2,18,19,26; ರೋಮಾ 16:3. **21**

**4:21** ವಚನಗಳು 9,13. ಆ ಪ್ರದೇಶದಲ್ಲಿ ಚಳಿಗಾಲ ವಿಪರೀತವಾಗಿರುವದು ಎನಿಸುತ್ತದೆ. **22**

**4:22** ಮಹಾ ಅಪೊಸ್ತಲನು ಬರೆದಿರುವ ಕಡೆಯ ಮಾತುಗಳು ಇವುಗಳಾಗಿವೆ. ಅವನು ತನ್ನ ಇಡೀ ಸೇವೆಯ ಎರಡು ಪ್ರಾಮುಖ್ಯವಾದ ಧ್ಯೇಯಗಳನ್ನು ಒತ್ತಿ ಹೇಳಿದ್ದಾನೆ – ಕರ್ತನಾದ ಯೇಸು ಕ್ರಿಸ್ತನ ಪ್ರಸನ್ನತೆಯು ಆತನ ಜನರೊಂದಿಗೆ ಇರುವದು ಮತ್ತು ದೇವರ ಕೃಪೆ ಅವರನ್ನು ರಕ್ಷಿಸುವದು, ಕಾಪಾಡುವದು ಹಾಗು ಆಶೀರ್ವದಿಸುವದು.